# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಜೂನ್ 9, 2021

ಸಂಪುಟ : 48 ಸಂಚಿಕೆ : 26 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ಗೊಬ್ಬರ, ಬೀಜದ ಕೃತಕ ಕೊರತೆ ಮಾಡಿದರೆ ಕ್ರಮ

ದಾವಣಗೆರೆ, ಜೂ. 8 - ಬಿತ್ತನೆ ಬೀಜ ಹಾಗೂ ರಸ ಗೊಬ್ಬರದ ಕೊರತೆಯಾಗ ದಂತೆ ರಾಜ್ಯ ಸರ್ಕಾರ ಕ್ರಮ ತೆಗೆದುಕೊಂಡಿದೆ. ಕೃತಕವಾಗಿ ಬೀಜ ಹಾಗೂ ರಸಗೊಬ್ಬರದ ಕೊರತೆ ಮಾಡುವ ವರ್ತಕರ ವಿರುದ್ಧ ಪ್ರಕರಣಗಳನ್ನು ದಾಖಲಿಸುವ ಜೊತೆಗೆ ಮಾರಾಟದ ಅನುಮತಿ ರದ್ದುಗೊಳಿಸಲಾಗುವುದು ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ಹೇಳಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣ ದಲ್ಲಿ ಮುಂಗಾರು ಸಿದ್ಧತೆ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು, ಈಗಾಗಲೇ ರಾಜ್ಯದಲ್ಲಿ 87,629 ಕ್ವಿಂಟಾಲ್ ಬಿತ್ತನೆ ಬೀಜವನ್ನು ವಿತರಿಸಲಾಗಿದ್ದು, ಇನ್ನೂ 1.63 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜ ದಾಸ್ತಾನಿದೆ. ಬಿತ್ತನೆ ಬೀಜಕ್ಕಾಗಿ ಮೊದಲು 50 ಕೋಟಿ ರೂ. ಸಬ್ಸಿಡಿ ಬಿಡುಗಡೆ ಮಾಡಿದ್ದು, ಕಳೆದ ಭಾನುವಾರ ಇನ್ನೂ 30 ಕೋಟಿ ರೂ. ಸಬ್ಸಿಡಿ ಬಿಡುಗಡೆ ಮಾಡಲಾಗಿದೆ ಎಂದರು.

**ಕೃಷಿ ಸಚಿವ ಬಿ.ಸಿ. ಪಾಟೀಲ್ ಎಚ್ಚರಿಕೆ**

ದಾವಣಗೆರೆ ಜಿಲ್ಲೆಯಲ್ಲಿ ಕಳಪೆ ಗುಣಮಟ್ಟದ ಜೈವಿಕ ಕೀಟನಾಶಕ ಪೂರೈಸಿದ 59 ಪ್ರಕರಣಗಳನ್ನು ಪತ್ತೆಹಚ್ಚಿ, ಮೊಕದ್ದಮೆ ಹೂಡಲಾಗಿದೆ, ಕೃಷಿ ಪರಿಕರ ಮಾರಾಟ ಮಾಡುವ 10 ಅಂಗಡಿಗಳ ಲೈಸೆನ್ಸ್ ರದ್ದುಪಡಿಸಲಾಗಿದೆ ಎಂದವರು ಹೇಳಿದರು.

ಸೆಣಬು ಹಾಗೂ ಹಸಿರೆಲೆ ಗೊಬ್ಬರಕ್ಕೆ ಪ್ರೋತ್ಸಾಹ ನೀಡಲು ರಾಜ್ಯ ಸರ್ಕಾರ 5 ಕೋಟಿ ರೂ. ಬಿಡುಗಡೆ ಮಾಡುತ್ತಿದೆ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್ ಮಾಹಿತಿ ನೀಡಿ, ಜಿಲ್ಲೆಯಲ್ಲಿ ಈ ವರ್ಷ 120 ಮಿ.ಮೀ. ವಾಡಿಕೆ ಮಳೆ ಬದಲಿಗೆ, 203 ಮಿ.ಮೀ. ಹೆಚ್ಚು ಮಳೆಯಾಗಿದೆ. ಮುಂಗಾರು ಹಂಗಾಮಿನಲ್ಲಿ 2.43 ಲಕ್ಷ ಹೆಕ್ಟೇರ್ ಬಿತ್ತನೆ ಕ್ಷೇತ್ರದ ಗುರಿ ಇದ್ದು, ಈವರೆಗೆ 8002 ಹೆಕ್ಟೇರ್ ಬಿತ್ತನೆಯಾಗಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಈಗಾಗಲೇ ಅಂತರ ಬೆಳೆ ಅಭಿಯಾನವನ್ನು ಆರಂಭಿಸಲಾಗಿದೆ. ಜಿಲ್ಲೆಯಲ್ಲಿ 5 ಸಾವಿರ ಹೆಕ್ಟೇರ್‌ನಲ್ಲಿ ಮಾತ್ರ ತೊಗರಿ ಬೆಳೆಯ (2ನೇ ಪುಟಕ್ಕೆ)

### ಬಿಎಸ್‌ವೈಗೆ ತೊಂದರೆ ಕೊಟ್ಟರೆ ಜನ ಉಗಿಯುತ್ತಾರೆ



ದಾವಣಗೆರೆ, ಜೂ. 7 - ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪದೇ ಪದೇ ತೊಂದರೆ ಕೊಟ್ಟರೆ, ಆಡಳಿತಕ್ಕೆ ತೊಂದರೆಯಾಗಿ ಪಕ್ಷಕ್ಕೆ ಕೆಟ್ಟ ಹೆಸರು ಬರುತ್ತದೆ. ಜನ ಬೀದಿ ಬೀದಿಯಲ್ಲಿ ಬಿಜೆಪಿಗೆ ಮರ್ಯಾದೆ ಕೊಡದ ರೀತಿಯಲ್ಲಿ ಉಗಿಯುವ ಕಾಲ ಬರುತ್ತದೆ ಎಂದು ಶಾಸಕ ಹಾಗೂ ಕೆಎಸ್‌ಡಿಎಲ್ ನಿಗಮದ ಅಧ್ಯಕ್ಷ ಮಾಡಾಳ್ (2ನೇ ಪುಟಕ್ಕೆ)

### ಬಿಜೆಪಿಯಲ್ಲಿರುವ ಶೇ.90ರಷ್ಟು ಹೊರಗಿನವರೇ



ದಾವಣಗೆರೆ, ಜೂ. 7 - ಬಿಜೆಪಿಯಲ್ಲಿ ಹೊರಗಿನವರು - ಒಳಗಿನವರು ಎಂಬ ಭೇದ ಇಲ್ಲ. ಹೊಸದಾಗಿ ಪಕ್ಷಕ್ಕೆ ಬಂದವರಿಗೆ ಅಸುರಕ್ಷತೆಯ ಭಾವನೆಯೂ ಇಲ್ಲ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ಹೇಳಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಬಿಜೆಪಿಗೆ ಬಂದ ಮೇಲೆ (2ನೇ ಪುಟಕ್ಕೆ)

### ನೀರಾವರಿ, ಯಂತ್ರೋಪಕರಣಗಳಿಗೆ ಸಬ್ಸಿಡಿ

ಹನಿ ನೀರಾವರಿ ಹಾಗೂ ಕೃಷಿ ಯಂತ್ರೋಪಕರಣಗಳಿಗೆ ರಾಜ್ಯ ಸರ್ಕಾರದಿಂದ ನೀಡಲಾಗುತ್ತಿದ್ದ ಸಬ್ಸಿಡಿಯನ್ನು ಮತ್ತೆ ಮುಂದುವರೆಸಲು ತೀರ್ಮಾನಿಸಲಾಗಿದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ತಿಳಿಸಿದ್ದಾರೆ.

ಈ ಎರಡೂ ಸಬ್ಸಿಡಿಗಳನ್ನು ಕಡಿತಗೊಳಿಸಲಾಗಿದೆ. ಇದರಿಂದ ರೈತರಿಗೆ ತೊಂದರೆಯಾಗು ತ್ತಿದೆ ಎಂದು ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಈ ಯೋಜನೆಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಸಬ್ಸಿಡಿ ನೀಡುತ್ತಿದ್ದವು. ಆರ್ಥಿಕ ಇಲಾಖೆಯಿಂದ ರಾಜ್ಯದ ಸಬ್ಸಿಡಿ ತಡೆಯಲಾಗಿತ್ತು ಎಂದರು.

ಸಂಕಷ್ಟದಲ್ಲಿರುವ ರೈತರಿಗೆ ತೊಂದರೆಯಾಗದಂತೆ ರಾಜ್ಯದ ಸಬ್ಸಿಡಿ ಮುಂದುವರೆ ಸುವಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂ ರಪ್ಪ ಸೂಚಿಸಿದ್ದಾರೆ. ಅದರಂತೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಪಾಟೀಲ್ ಹೇಳಿದರು.

## 44 ಕೋಟಿ ಡೋಸ್ ಲಸಿಕೆ ಖರೀದಿ

### ಪ್ರಧಾನಿ ಮೋದಿ ಘೋಷಣೆ ಬೆನ್ನಲ್ಲೇ ಕೇಂದ್ರದ ಕ್ರಮ



ನವದೆಹಲಿ, ಜೂ. 8 – ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆಗಳ 44 ಕೋಟಿ ಡೋಸ್ ಖರೀದಿಗೆ ಆದೇಶ ಹೊರಡಿಸಿರುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. ರಾಜ್ಯಗಳ ಕೋಟಾದ ಲಸಿಕೆ ಸಹ ತಾನೇ ಖರೀದಿ ಮಾಡಿ ಉಚಿತವಾಗಿ ನೀಡುವುದಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ನಿನ್ನೆ ಪ್ರಕಟಿಸಿದ ನಂತರ ಈ ಬೆಳವಣಿಗೆಯಾಗಿದೆ.

ಬರುವ ಆಗಸ್ಟ್‌ನಿಂದ ಡಿಸೆಂಬರ್ ಒಳಗೆ 44 ಕೋಟಿ ಡೋಸ್ ಲಸಿಕೆಗಳು ಉತ್ಪಾದಕರಿಂದ ಲಭ್ಯವಾಗಲಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕೊರೊನಾ ಲಸಿಕಾ ಯೋಜನೆ ಮಾರ್ಗಸೂಚಿಯಲ್ಲಿ ಬದಲಾವಣೆ ಮಾಡಿದ ನಂತರ ಕೇಂದ್ರ ಸರ್ಕಾರ ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದಿಂದ 25 ಕೋಟಿ ಡೋಸ್ ಕೋವಿಶೀಲ್ಡ್ ಲಸಿಕೆ ಹಾಗೂ ಭಾರತ್ ಬಯೋಟೆಕ್‌ನಿಂದ 19 ಕೋಟಿ ಡೋಸ್ ಕೋವ್ಯಾಕ್ಸಿನ್ ಲಸಿಕೆಗೆ ಆದೇಶ ಹೊರಡಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಲ್ಲದೇ ಈ ಎರಡೂ ಲಸಿಕೆಗಳ ಖರೀದಿಗಾಗಿ ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಮತ್ತು ಭಾರತ್ ಬಯೋಟೆಕ್‌ಗಳಿಗೆ ಶೇ.30ರ ಮುಂಗಡ ಪಾವತಿ ಮಾಡಲಾಗಿದೆ ಎಂದೂ ಅವರು ಹೇಳಿದ್ದಾರೆ. ಕಳೆದ ಜನವರಿ 16 ರಿಂದಲೂ ಸಂಪೂರ್ಣ ಸರ್ಕಾರಿ ಮಾರ್ಗದ ಮೂಲಕ ಲಸಿಕಾ ಅಭಿಯಾನವನ್ನು ಪರಿಣಾಮಕಾರಿಯಾಗಿ ನಡೆಸಲು ರಾಜ್ಯಗಳಿಗೆ ಕೇಂದ್ರ ಸರ್ಕಾರ ಸಹಕಾರ ನೀಡುತ್ತಾ ಬಂದಿದೆ ಎಂದವರು ಹೇಳಿದ್ದಾರೆ.

ಮೇ 1ರಂದು ಕೇಂದ್ರ ಸರ್ಕಾರ 18 ವರ್ಷದ ಮೇಲಿನ ಎಲ್ಲರೂ ಲಸಿಕೆ ಪಡೆಯಬಹುದು ಎಂದು ಅನುಮತಿ ನೀಡಿತ್ತು. ಇದರೊಂದಿಗೆ ಮೂರನೇ ಹಂತದ ಲಸಿಕಾ ಅಭಿಯಾನ ಆರಂಭವಾಗಿತ್ತು. 18 ವರ್ಷದ ಮೇಲಿನ ಎಲ್ಲರಿಗೂ ಲಸಿಕೆ ನೀಡಲು ನಿರ್ಧರಿಸಿರುವುದರಿಂದ, ನಮ್ಮ ಗುರಿ ಮತ್ತಷ್ಟು ಸಾರ್ವತ್ರಿಕ ವಾಗಿದೆ. ಸರ್ಕಾರಿ ಆರೋಗ್ಯ ಕೇಂದ್ರಗಳ ಮೂಲಕ ಉಚಿತವಾಗಿ ಕೊರೊನಾ ಲಸಿಕೆ ನೀಡಲಾಗುವುದು ಎಂದು ಅಧಿಕಾರಿ ಹೇಳಿದ್ದಾರೆ.

## ಆಗಸ್ಟ್ 28ರಿಂದ ಸಿಇಟಿ ಪರೀಕ್ಷೆ ನಡೆಸಲು ನಿರ್ಧಾರ

**ವೃತ್ತಿಪರ ಶಿಕ್ಷಣಕ್ಕೆ ಸಿಇಟಿ ಮಾತ್ರ ಪರಿಗಣನೆ**

ಬೆಂಗಳೂರು, ಜೂ. 8 - ಪ್ರಸಕ್ತ ಸಾಲಿನಲ್ಲಿ ದ್ವಿತೀಯ ಪಿಯುಸಿ ಅಂತಿಮ ಪರೀಕ್ಷೆಯನ್ನು ರದ್ದು ಮಾಡಿರುವುದರಿಂದ ಎಂಜಿನಿಯರಿಂಗ್ ಸೇರಿದಂತೆ, ಎಲ್ಲ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಅಂಕಗಳನ್ನು ಮಾತ್ರ ಪರಿಗಣನೆ ಮಾಡಲು ನಿರ್ಧರಿಸಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವರೂ ಆದ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಇಂದಿಲ್ಲಿ ಪ್ರಕಟಿಸಿದರು.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಆಗಸ್ಟ್ 28, 29 ಹಾಗೂ 30 ರಂದು ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ನಡೆಯಲಿದ್ದು, ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಅವಕಾಶ ಇದೆ (2ನೇ ಪುಟಕ್ಕೆ)

## ಬೀದಿ ವ್ಯಾಪಾರಿಗಳಿಗೆ 2,000 ರೂ.

ಬೆಂಗಳೂರು, ಜೂ. 8 - ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮಂಗಳವಾರ ಕೌಶಲ್ಯಾ ಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಅಡಿಯಲ್ಲಿ ದೀನ ದಯಾಳ್ ಅಂತ್ಯೋ ದಯ ಯೋಜನೆ-ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನದಡಿ ನೋಂದಾಯಿಸಿರುವ ಬೀದಿ ಬದಿ ವ್ಯಾಪಾರಿಗಳಿಗೆ ಕೊರೊನಾ ಎರಡನೇ ಅಲೆಯ ಪರಿಹಾರ ಪ್ಯಾಕೇಜ್‌ನಡಿ ಘೋಷಿಸಿದ ತಲಾ 2 ಸಾವಿರ ರೂ.ಗಳ ಸಹಾಯ ಧನ ವರ್ಗಾವಣೆಗೆ ಚಾಲನೆ ನೀಡಿದರು.

ಇದು ಕೊರೊನಾದಿಂದ ಸಂಕಷ್ಟಕ್ಕೊಳಗಾದವರಿಗೆ ಮಾನವೀಯ ನೆಲೆಯಲ್ಲಿ ಸ್ಪಂದಿಸುವ ನಮ್ಮ ಸರ್ಕಾರದ ಒಂದು ಪ್ರಯತ್ನವಾಗಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ನಗರ ಸ್ಥಳೀಯ ಸಂಸ್ಥೆಗಳಿಂದ ಸಮೀಕ್ಷೆಯ ಮೂಲಕ 2,16,439 ಬೀದಿ ಬದಿ ವ್ಯಾಪಾರಸ್ಥರನ್ನು ಗುರುತಿಸಲಾಗಿದೆ. ಇವರುಗಳಿಗೆ ಗುರುತಿನ (2ನೇ ಪುಟಕ್ಕೆ)

## 6 ಸಾವಿರ ಕೊರೊನಾ ಟೆಸ್ಟ್‌ಗೆ ಭೈರತಿ ಸೂಚನೆ



ದಾವಣಗೆರೆ, ಜೂ. 7 - ಜಿಲ್ಲೆಯಲ್ಲಿ ಪ್ರತಿದಿನ 6 ಸಾವಿರ ಕೊರೊನಾ ಟೆಸ್ಟ್‌ಗಳನ್ನು ಮಾಡಬೇಕು ಹಾಗೂ ಕೊರೊನಾ ಪ್ರಕರಣಗಳನ್ನು ನಿಯಂತ್ರಣಕ್ಕೆ ತರಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಕೊರೊನಾ ನಿಯಂತ್ರಣ ಕುರಿತು ಜಿಲ್ಲಾಡಳಿತ ಭವನದಲ್ಲಿ ಕರೆಯಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು, ರಾಜ್ಯ ಸರ್ಕಾರ ಜಿಲ್ಲೆಗೆ ಪ್ರತಿದಿನ 4,700 ಟೆಸ್ಟ್‌ಗಳ ಗುರಿ ನೀಡಿದೆ. ಜಿಲ್ಲೆಯಲ್ಲಿ 6 ಸಾವಿರ ಟೆಸ್ಟ್‌ಗಳ ಗುರಿ ಇರಲಿ ಎಂದವರು ಹೇಳಿದರು.

ಕೊರೊನಾ ಸೋಂಕಿನ ಸರಪಳಿ ತುಂಡರಿಸಲು ಟೆಸ್ಟ್ ಸಂಖ್ಯೆ ಹೆಚ್ಚಿಸಬೇಕಿದೆ. ಇದಕ್ಕಾಗಿ ಸರ್ಕಾರ 4,736 ಟೆಸ್ಟ್‌ಗಳ ಗುರಿ ನಿಗದಿಪಡಿಸಿದೆ. ಪ್ರಸಕ್ತ 3,500 ಟೆಸ್ಟ್ ಮಾತ್ರ ಮಾಡಲಾಗುತ್ತಿದೆ, ಟೆಸ್ಟಿಂಗ್ ಸರಿಯಾಗಿ ಆಗುತ್ತಿಲ್ಲ ಎಂಬ ದೂರುಗಳಿವೆ. ಜಿಲ್ಲೆಯಲ್ಲಿ ಕೋವಿಡ್ ಪಾಸಿಟಿವಿಟಿ ದರ ಶೇ. 23 ಕ್ಕಿಂತ ಹೆಚ್ಚಾಗಿಯೇ ಇದೆ. ಇದು ಕನಿಷ್ಟ ಶೇ. 5 ಕ್ಕಿಂತಲೂ ಕಡಿಮೆಯಾಗುವುದು ಅತಿ ಅವಶ್ಯಕವಾಗಿದೆ ಎಂದು ಸಚಿವರು ಹೇಳಿದರು.

ಇದಕ್ಕೆ ಉತ್ತರಿಸಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಟೆಸ್ಟ್ ಮಾಡುವ ಪ್ರಯೋಗ ತಂತ್ರಜ್ಞರಿಗೆ ಪ್ರೋತ್ಸಾಹಧನ ನೀಡುವುದಾಗಿ ಸೂಚನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ನಿಗದಿತ (2ನೇ ಪುಟಕ್ಕೆ)

### ಭತ್ತ ಖರೀದಿ ಕೇಂದ್ರ ತೆರೆದಿದ್ದು ಉಸ್ತುವಾರಿ ಸಚಿವರಿಗೇ ಗೊತ್ತಿಲ್ಲ !

ದಾವಣಗೆರೆ, ಜೂ. 7 - ಭತ್ತ ಖರೀದಿ ಕೇಂದ್ರ ಸದ್ಯದಲ್ಲೇ ತೆರೆಯುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅವರು ತಿಂಗಳಿನಿಂದ ಹೇಳುತ್ತಲೇ ಬರುತ್ತಿದ್ದಾರೆ. ಆದರೆ, ಖರೀದಿ ಕೇಂದ್ರ ತೆರೆದಿರುವುದಷ್ಟೇ ಅಲ್ಲದೇ, ನೋಂದಣಿ ಪ್ರಕ್ರಿಯೆಯೂ ಮುಗಿದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ!

ಕೃಷಿ ಸಚಿವ ಬಿ.ಸಿ. ಪಾಟೀಲ್ ಅವರ ಜೊತೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಭೈರತಿ, ಖರೀದಿ ಕೇಂದ್ರಕ್ಕೆ ಹಲವು ಬಾರಿ ಪ್ರಯತ್ನ ಆಗಿದೆ. ಕೊರೊನಾ ಬಗ್ಗೆ ನಿಗಾ ವಹಿಸುತ್ತಿರುವುದರಿಂದ ಕೇಂದ್ರ ತೆರೆಯುವುದು ತಡವಾಗಿದೆ ಎಂದರು.

ಪಾಟೀಲ್ ಅವರು ಮಾತನಾಡಿ, ಬೆಂಬಲ ಬೆಲೆಯಲ್ಲಿ ಭತ್ತ ಖರೀದಿಸಲು ನೋಂದಣಿಗೆ ಸಮಯ ಮುಗಿದಿದೆ. ಸಮಯ ವಿಸ್ತರಿಸಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಬಳಿ ಮಾತನಾಡಿ, ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಕೃಷಿ ಇಲಾಖೆಯ ಅಧಿಕಾರಿಯೊಬ್ಬರು, ಈಗಾಗಲೇ ಜಿಲ್ಲೆಯಲ್ಲಿ ಖರೀದಿ ಕೇಂದ್ರ ತೆರೆಯಲಾಗಿದೆ. ನೋಂದಣಿ ಅವಧಿ ಮೇ 5ರಂದು ಮುಕ್ತಾಯಗೊಂಡಿದ್ದು, ಆ ವೇಳೆಗೆ ಮೂವರು ಮಾತ್ರ ನೋಂದಣಿ ಮಾಡಿಸಿಕೊಂಡಿದ್ದಾರೆ ಎಂದರು.

ಖರೀದಿ ಕೇಂದ್ರ ತೆರೆದಿದ್ದರೆ ಅದು ಸಚಿವರಿಗೆ ಗೊತ್ತಿರಲಿಲ್ಲವೇ? ಸಚಿವರಿಗೇ ಗೊತ್ತಿರದೇ ಇದ್ದರೆ ರೈತರಿಗೆ ಹೇಗೆ ತಿಳಿಯುತ್ತದೆ? ಯಾರಿಗೂ ತಿಳಿಯದ ರೀತಿಯಲ್ಲಿ ಖರೀದಿ ಕೇಂದ್ರ ತೆರೆದಿದ್ದು ಯಾವ ರೀತಿ? ಎಂಬ ಪ್ರಶ್ನೆಗಳು ಈಗ ಉದ್ಭವಿಸಿವೆ.

## ಲಾಕ್ ಸಡಿಲಿಕೆಯಾದರೂ ಗುಂಪಾಗುವುದು ಬೇಡ

ನವದೆಹಲಿ, ಜೂ. 8 – ಕೊರೊನಾ ಪ್ರಕರಣಗಳು ತೀವ್ರವಾಗಿ ಇಳಿಕೆ ಕಾಣುತ್ತಿದ್ದರೂ ಸಹ, ಸೋಂಕು ಮತ್ತಷ್ಟು ಹರಡುವುದನ್ನು ತಡೆಯಲು ದೊಡ್ಡ ಸಂಖ್ಯೆಯಲ್ಲಿ ಜನಸಂದಣಿಯಾಗುವುದನ್ನು ತಡೆಯಬೇಕು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಕೊರೊನಾ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಕೇಂದ್ರ ಆರೋಗ್ಯ ಸಚಿವಾಲಯದ ಜಂಟಿ ಕಾರ್ಯದರ್ಶಿ ಲವ ಅಗರ್‌ವಾಲ್, ಮೇ 7ರಂದು ಕೊರೊನಾ ಸೋಂಕು ಅತಿ ಹೆಚ್ಚಾಗಿತ್ತು. ನಂತರ ಕೊರೊನಾ ಸೋಂಕು ಪ್ರಮಾಣ ಶೇ.79ರಷ್ಟು ಇಳಿಕೆಯಾಗಿದೆ ಎಂದಿದ್ದಾರೆ. ಎರಡನೇ ಅಲೆಯ ಹೊಸ ಕೊರೊನಾ ಪ್ರಕರಣ ಗಳಲ್ಲಿ ಗಣನೀಯ (5ನೇ ಪುಟಕ್ಕೆ)

## ಲಸಿಕೆ, ಆಹಾರಕ್ಕಾಗಿ 1.45 ಲಕ್ಷ ಕೋಟಿ ರೂ. ವೆಚ್ಚ

ನವದೆಹಲಿ, ಜೂ. 8 – ಕೊರೊನಾ ಎರಡನೇ ಅಲೆಯ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಘೋಷಿಸಿರುವ ಉಚಿತ ಲಸಿಕೆ ಹಾಗೂ ಉಚಿತ ಆಹಾರ ಧಾನ್ಯಕ್ಕಾಗಿ 1.45 ಲಕ್ಷ ಕೋಟಿ ರೂ.ಗಳ ಹೆಚ್ಚುವರಿ ವೆಚ್ಚವಾಗಲಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ದೇಶದ ಎಲ್ಲ ವಯಸ್ಕರಿಗೆ ಉಚಿತ ಲಸಿಕೆ ನೀಡುವುದಾಗಿ ಘೋಷಿಸಿದ್ದರು. ಇದಕ್ಕಾಗಿ ಸರ್ಕಾರ 50 ಸಾವಿರ ಕೋಟಿ ರೂ.ಗಳವರೆಗೆ ವೆಚ್ಚ ಮಾಡಬೇಕಿದೆ. ಬಜೆಟ್‌ನಲ್ಲಿ ಲಸಿಕೆಗಾಗಿ 35 ಸಾವಿರ ಕೋಟಿ ರೂ. (5ನೇ ಪುಟಕ್ಕೆ)

## ಬಿಜೆಪಿ ಶಾಸಕ ಉದಾಸಿ ಇನ್ನಿಲ್ಲ



ಬೆಂಗಳೂರು, ಜೂ. 8 – ಬಿಜೆಪಿ ಹಿರಿಯ ಶಾಸಕ ಹಾಗೂ ಮಾಜಿ ಸಚಿವ ಸಿ.ಎಂ. ಉದಾಸಿ ಮಂಗಳವಾರ ಖಾಸಗಿ ಆಸ್ಪತ್ರೆಯಲ್ಲಿ ವಯೋಸಂಬಂಧಿ ರೋಗದಿಂದ ನಿಧನರಾಗಿದ್ದಾರೆ. ಅವರಿಗೆ 85 ವರ್ಷ ವಯಸ್ಸಾಗಿತ್ತು.

ಅವರು ಪತ್ನಿ ಹಾಗೂ ಹಾವೇರಿ - ಗದಗ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಸಂಸದ ಪುತ್ರ ಶಿವಕುಮಾರ್ ಉದಾಸಿ ಅವರನ್ನು ಅಗಲಿದ್ದಾರೆ. ಅವರ ಅಂತ್ಯಕ್ರಿಯೆ ಬುಧವಾರ ಹಾನಗಲ್‌ನಲ್ಲಿ ನೆರವೇರಲಿದೆ.

1983ರಲ್ಲಿ ಹಾನಗಲ್ ಕ್ಷೇತ್ರದಿಂದ ಅವರು ಸ್ವತಂತ್ರ ಅಭ್ಯರ್ಥಿಯಾಗಿ ವಿಧಾನಸಭೆ ಪ್ರವೇಶಿಸಿದ್ದರು. ನಂತರ ಆರು ಬಾರಿ ಅವರು ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದರು.

1985ರಲ್ಲಿ ಜನತಾ ಪಾರ್ಟಿ ಅಭ್ಯರ್ಥಿಯಾಗಿ ಹಾಗೂ (5ನೇ ಪುಟಕ್ಕೆ)

## ಖಾಸಗಿ ಕೇಂದ್ರಗಳ ಲಸಿಕೆಗೆ ಎಲೆಕ್ಟ್ರಾನಿಕ್ ವೋಚರ್ : ಕೇಂದ್ರ

ನವದೆಹಲಿ ಜೂ. 8 – ಕೇಂದ್ರ ಸರ್ಕಾರ ಲಸಿಕೆ ಮಾರ್ಗಸೂಚಿಯನ್ನು ಬದಲಿಸಿದ್ದು, ಬಡವರು ಖಾಸಗಿ ಕೇಂದ್ರಗಳಲ್ಲಿ ಲಸಿಕೆ ಪಡೆಯಲು ರಿಸರ್ವ್ ಬ್ಯಾಂಕ್‌ನಿಂದ ಮಾನ್ಯತೆ ಪಡೆದ ಎಲೆಕ್ಟ್ರಾನಿಕ್ ವೋಚರ್ ಬಳಸಬಹುದು ಎಂದು ತಿಳಿಸಿದೆ.

ಕೊವಿನ್ ವೆಬ್ ತಾಣದ ಮೂಲಕ ಪ್ರತಿಯೊಬ್ಬ ನಾಗರಿಕ ಲಸಿಕೆಗಾಗಿ ನೋಂದಾಯಿಸಿಕೊಳ್ಳಬಹುದು. ಇದರ ಬದಲು ಸ್ಥಳದಲ್ಲೇ ಹೆಸರು ನೋಂದಾಯಿಸಿಕೊಳ್ಳಲೂ ಲಸಿಕಾ ಕೇಂದ್ರಗಳಲ್ಲಿ ಅವಕಾಶವಿದೆ.


ಸರ್ಕಾರಿ ಲಸಿಕಾ ತಾಣಗಳಲ್ಲಿ ಲಸಿಕೆ ಉಚಿತವಾಗಿದೆ. (4ನೇ ಪುಟಕ್ಕೆ)

## ಆದಾಯ ತೆರಿಗೆ ವೆಬ್‌ತಾಣದಲ್ಲಿ ತೊಡಕು ಇನ್ಫೋಸಿಸ್‌ಗೆ ಬಗೆಹರಿಸಲು ಸೂಚನೆ

ನವದಹೆಲಿ, ಜೂ. 8 – ಆದಾಯ ತೆರಿಗೆ ಇಲಾಖೆಯ ನೂತನ ಇ-ಫೈಲಿಂಗ್ ವೆಬ್ ತಾಣದಲ್ಲಿ ಲೋಪ ಕಾಣಿಸಿಕೊಂಡಿದೆ. ಈ ಬಗ್ಗೆ ಬಳಕೆದಾರರು ಟ್ವಿಟ್ಟರ್‌ನಲ್ಲಿ ದೂರು ನೀಡಿದ್ದು, ಸಮಸ್ಯೆ ಬಗೆಹರಿಸುವಂತೆ ವೆಬ್ ತಾಣ ನಿರ್ವಹಿಸುವ ಇನ್ಫೋಸಿಸ್‌ಗೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ. ಮುಂದಿನ ಪೀಳಿಗೆ ಆದಾಯ ತೆರಿಗೆ ಮಾಹಿತಿ ದಾಖಲಿಸುವ ವೆಬ್ ತಾಣವನ್ನು ಇನ್ಫೋಸಿಸ್ ಅಭಿವೃದ್ಧಿ (5ನೇ ಪುಟಕ್ಕೆ)




# ಲಸಿಕೆ ಪಡೆಯಲು ಸ್ಥಳೀಯರಿಗೆ ಆದ್ಯತೆ ನೀಡಲು ಶಾಸಕ ಚಂದ್ರಪ್ಪ ಕರೆ



ಭರಮಸಾಗರ

ಭರಮಸಾಗರ, ಜೂ.8- ಸ್ಥಳೀಯ ಆರೋಗ್ಯ ಕೇಂದ್ರದಲ್ಲಿ ಬೇರೆ ಊರಿನವರು ಬಂದು ಲಸಿಕೆ ಪಡೆಯುತ್ತಿರುವುದರಿಂದ ಸ್ಥಳೀಯರು ಲಸಿಕೆ ಪಡೆಯುವುದಕ್ಕೆ ತೊಂದರೆಯಾಗುತ್ತಿದೆ.

ಆಧಾರ್ ಕಾರ್ಡ್ ಪರೀಕ್ಷಿಸಿ, ಸ್ಥಳೀಯರಿಗೆ ಆದ್ಯತೆ ನೀಡಬೇಕು ಎಂದು ಶಾಸಕ ಎಂ.ಚಂದ್ರಪ್ಪ ಅವರು ಆರೋಗ್ಯ ಅಧಿಕಾರಿಗಳಿಗೆ ನಿರ್ದೇಶಿಸಿದ್ದಾರೆ.

ಸ್ಥಳೀಯ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿದ ಶಾಸಕರು ಮಾತನಾಡಿ, ಇಲ್ಲಿ ಕೋವಿಡ್ ಪರೀಕ್ಷಾ ಕೇಂದ್ರ ಮತ್ತು ಲಸಿಕಾ ಕೇಂದ್ರ ಒಂದೇ ಸ್ಥಳದಲ್ಲಿ ಇರುವುದರಿಂದ ಸೋಂಕು ಹರಡುವ ಸಾಧ್ಯತೆ ಇದೆ. ಹಾಗಾಗಿ ಕೋವಿಡ್ ಪರೀಕ್ಷೆಗೆ ಸ್ಥಳೀಯ ಸರ್ಕಾರಿ ಶಾಲೆಯಲ್ಲಿ ವ್ಯವಸ್ಥೆ ಮಾಡುವಂತೆ ಸೂಚಿಸಿದರು. ಯಾವುದೇ ಕಾರಣಕ್ಕೂ ಲಸಿಕೆಯ ಕೊರತೆಯಾಗಬಾರದು ಎಂದರು.

ಸಮೀಪದ ಕೋಡಿರಂಗವ್ವನಹಳ್ಳಿ ಮೊರಾರ್ಜಿ ವಸತಿ ಶಾಲೆಯಲ್ಲಿ ಕೋವಿಡ್ ಕೇಂದ್ರದ ವ್ಯವಸ್ಥೆ ಮಾಡಿದ್ದು, ಯಾವುದೇ ಸೋಂಕಿತರು ದಾಖಲಾಗಿಲ್ಲ. ಹಾಗಾಗಿ ಆರೋಗ್ಯ ಇಲಾಖೆ ಅಲ್ಲಿನ ವ್ಯವಸ್ಥೆ ಇರುವ ಬಗ್ಗೆ ಸೋಂಕಿತರಿಗೆ ಮನದಟ್ಟು ಮಾಡಬೇಕು.

ಸಿರಿಗೆರೆಯಲ್ಲಿ 34 ಕ್ಕೂ ಹೆಚ್ಚು ಸೋಂಕಿತರು ದಾಖಲಾಗಿದ್ದು, ಆ ಭಾಗದ ಜನರು ಇಲ್ಲಿಗೆ ದಾಖಲಿಸಬೇಕು ಎಂದರು.

ಜಿ.ಪಂ. ಸದಸ್ಯ ಡಿ.ವಿ. ಶರಣಪ್ಪ, ಕೋಗುಂಡೆ ಮಂಜಣ್ಣ, ಮಂಡಳಿ ಅಧ್ಯಕ್ಷ ಶೈಲೇಶ್ ಕುಮಾರ್, ಚಂದ್ರಣ್ಣ, ತರಗಾರ ಮಂಜಣ್ಣ, ಫಣಿಯಪ್ಪ, ಪತ್ರಕರ್ತ ಅನಂತಪದ್ಮನಾಭ ರಾವ್, ಎಸ್. ನಾರಾಯಣ ರಾವ್, ಬಿ.ಎಸ್. ವೆಂಕಟಾದ್ರಿ ಶೆಟ್ಟಿ, ಎ. ಸಿದ್ಧಲಿಂಗಪ್ಪ, ಡಿ.ಎಸ್. ಪ್ರದೀಪ್ ಕುಮಾರ್, ಟಿಹೆಚ್‌ಒ ಗಿರೀಶ್ ಮತ್ತಿತರರು ಉಪಸ್ಥಿತರಿದ್ದರು.

# ರೈತ ಸಂಪರ್ಕ ಕೇಂದ್ರ ತೆರೆಯಲು ಸಚಿವರ ನಿರ್ದೇಶನ

ಹರಿಹರ, ಜೂ.8- ತಾಲ್ಲೂಕಿನ ರೈತರಿಗೆ ಕೃಷಿ ಇಲಾಖೆ ವತಿಯಿಂದ ಯಾವುದೇ ರೀತಿಯ ತೊಂದರೆ ಆಗದಂತೆ ವ್ಯವಸ್ಥೆ ಮಾಡಲಾಗಿದ್ದು, ರೈತರು ಅದನ್ನು ಸದುಪಯೋಗಪಡಿಸಿಕೊಂಡು ಉತ್ತಮ ಜೀವನ ನಡೆಸುವಂತೆ ಕೃಷಿ ಸಚಿವ ಬಿ. ಸಿ. ಪಾಟೀಲ್ ಕರೆ ನೀಡಿದರು.

ನಗರದ ತರಳಬಾಳು ಶಾಲೆಯ ಆವರಣದಲ್ಲಿ ಸಾಧು ವೀರಶೈವ ಸಮಾಜ, ತರಳಬಾಳು ಯುವಕ ಸಂಘ, ತರಳಬಾಳು ಮಹಿಳಾ ಸಂಘ, ತರಳಬಾಳು ಸೇವಾ ಸಮಿತಿ ಸಹಯೋಗದಲ್ಲಿ ಕೊರೊನಾ ರೋಗಿಗಳಿಗೆ, ರೋಗಿಗಳ ಕುಟುಂಬದ ಪರಿಚಾರಕರಿಗೆ, ವಾರಿಯರ್ಸ್‌ಗಳಿಗೆ ತರಳಬಾಳು ಶಾಲೆಯಲ್ಲಿ ನಡೆಯುತ್ತಿರುವ ಉಚಿತ ದಾಸೋಹ ಕೇಂದ್ರಕ್ಕೆ ಇಂದು ಬೆಳಿಗ್ಗೆ ಭೇಟಿ ನೀಡಿ ಯುವಕರಿಗೆ ಶುಭ ಹಾರೈಸಿದ ಅವರು, ತಮ್ಮನ್ನು ಭೇಟಿಯಾದ ಪತ್ರಕರ್ತರ ಜೊತೆ ಮಾತನಾಡಿದರು.

ನಗರದಲ್ಲಿ ಈ ಹಿಂದೆ ರೈತ ಸಂಪರ್ಕ ಕೇಂದ್ರಗಳು ಎರಡು ಇದ್ದವು. ಈಗ ರೈತ ಸಂಪರ್ಕ ಕೇಂದ್ರವಿಲ್ಲದೆ ಸ್ಥಳೀಯ ರೈತರಿಗೆ ತೊಂದರೆ ಆಗುತ್ತಿದೆ. ಸ್ಥಳೀಯ ರೈತರಿಗೆ ಒಂದು ರೈತ ಸಂಪರ್ಕ ಕೇಂದ್ರವನ್ನು ತೆರೆಯುವಂತೆ ಸಚಿವರಲ್ಲಿ ಮನವಿ ಮಾಡಿದಾಗ, ಸ್ಥಳದಲ್ಲೇ ಹಾಜರಿದ್ದ ಕೃಷಿ ಸಹಾಯಕ ನಿರ್ದೇಶಕ ವಿ.ಪಿ. ಗೋವರ್ಧನ್ ಅವರಿಗೆ ಅತಿ ಶೀಘ್ರದಲ್ಲಿ ಹರಿಹರ ನಗರದಲ್ಲಿ ರೈತ ಸಂಪರ್ಕ ಕೇಂದ್ರವನ್ನು ತೆರೆಯಲು ಸೂಚನೆ ನೀಡಿದರು.


ಎಪಿಎಂಸಿ ಆವರಣದಲ್ಲಿರುವ ಯಂತ್ರೋಪಕರಣಗಳ ಕೇಂದ್ರವು ಕಳೆದ ಎರಡು ವರ್ಷಗಳಿಂದ ಕಾರ್ಯನಿರ್ವಹಣೆ ಮಾಡುತ್ತಿಲ್ಲ ಎಂದು ಸಚಿವರ ಗಮನಕ್ಕೆ ತಂದಾಗ, ಕೂಡಲೇ ಅದನ್ನು ಪ್ರಾರಂಭ ಮಾಡುವಂತೆ ಹಾಗೂ ಅಲ್ಲಿ ರೈತರಿಗೆ ಯಾವುದೇ ರೀತಿಯ ತೊಂದರೆ ಬರದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ತಿಳಿಸಿದರು. ರಾಜ್ಯದ ರೈತ ಕುಟುಂಬಕ್ಕೆ ಅನುಕೂಲ ಆಗುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳು 10 ಸಾವಿರ ರೂ. ಸಹಾಯಧನ ಘೋಷಣೆ ಮಾಡಿದ್ದಾರೆ. ಇದರಿಂದಾಗಿ ರೈತ ಕುಟುಂಬಕ್ಕೆ ಆಸರೆಯಾಗುತ್ತದೆ ಎಂದರು.



ಹರಿಹರದ ಕಾರ್ಯಕ್ರಮದಲ್ಲಿ ಕೃಷಿ ಸಚಿವ ಬಿ.ಸಿ.ಪಾಟೀಲ್

ಈ ಸಂದರ್ಭದಲ್ಲಿ ಕೊಂಡಜ್ಜಿ ಶಿವಕುಮಾರ್, ಬೆಳ್ಳೂಡಿ ರಾಮಚಂದ್ರಪ್ಪ, ವೀರಣ್ಣ ಕೊಂಡಜ್ಜಿ, ಕಿರಣ್ ಮೂಲಿಮನಿ, ಇಂದಿನ ದಾಸೋಹದ ಸೇವಾರ್ಥಿ ವಕೀಲ ಹೊಳೆಸಿರಿಗೆರೆ ಎನ್.ಬಿ. ಗಂಗಾಧರ್, ವಕೀಲ ಉಮೇಶ್ ಹುಲ್ಮನಿ, ಬೆಳ್ಳೂಡಿ ಹನುಮಂತಗೌಡ್ರು, ಕೆ.ವಿ. ರುದ್ರೇಶ್, ಮರುಳಪ್ಪ ಸ್ವಾಮಿ, ವಕೀಲ ಶಾಂತರಾಜ್, ಸಿದ್ದಾರ್ಥ್, ಗ್ರಾಮ ಪಂಚಾಯ್ತಿ ಸದಸ್ಯೆ ಗೀತಮ್ಮ, ನಗರಸಭೆ ಸದಸ್ಯೆ ಅಶ್ವಿನಿ ಕೃಷ್ಣ, ಹನಗವಾಡಿ ಮಂಜಣ್ಣ, ವೀರಣ್ಣ, ಹಾರ್ನಳ್ಳಿ ರಾಜಣ್ಣ, ಆಶ್ರಯ ಸಮಿತಿ ಸದಸ್ಯ ಸುನೀಲ್, ಮಾರುತಿ ಶೆಟ್ಟಿ, ವಸಂತ್ ಗೌಡಗೆರೆ, ವಿನಾಯಕ ಆರಾಧ್ಯ, ಭರತ್ ಅಮರಾವತಿ, ಆಟೋ ಮಂಜು ಇನ್ನಿತರರಿದ್ದರು.

# ಕೊರೊನಾ ನಿಯಮಗಳ ನಡುವೆಯೂ ನಿಲ್ಲದ ಜನರ ಓಡಾಟ



ಹರಿಹರ

ಹರಿಹರ, ಜೂ.8- ಜಿಲ್ಲಾ ಆಡಳಿತವು ಕೊರೊನಾ ರೋಗ ಹತೋಟಿಗಾಗಿ ಜೂ.14 ರವರೆಗೆ ಲಾಕ್‌ಡೌನ್ ಸೇರಿದಂತೆ, ವಿವಿಧ ರೀತಿಯಲ್ಲಿ ಪ್ರತಿನಿತ್ಯವೂ ಹರ ಸಾಹಸವನ್ನು ಮಾಡುತ್ತಿದೆ. ಆದಾಗ್ಯೂ ಸಹ ಕೋವಿಡ್ ರೋಗವು ನಿಯಂತ್ರಣಕ್ಕೆ ಬಾರದೆ ಪ್ರತಿದಿನ ಸಾವು, ನೋವುಗಳು ಹೆಚ್ಚಿನ ಪ್ರಮಾಣದಲ್ಲಿ ಇರುವುದು ಕಾಣುತ್ತಿದ್ದೇವೆ.

ಸೋಂಕನ್ನು ಹತೋಟಿಗೆ ತರಲು ಸರ್ಕಾರ ಲಾಕ್‌ಡೌನ್ ಜಾರಿಗೆ ತಂದಿದೆ. ಸಾರ್ವಜನಿಕರು ಸುರಕ್ಷಿತವಾಗಿರುವುದಕ್ಕೆ ಸರ್ಕಾರ ಹರ ಸಾಹಸ ಮಾಡುತ್ತಿದ್ದರೂ ಸಹ ಕೊರೊನಾ ನಿಯಂತ್ರಣ ಮಾಡಲು ಆಗದ ಸ್ಥಿತಿಯಲ್ಲಿ ಬಂದು ನಿಂತಿದೆ.

ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಪ್ರಮುಖ ರಸ್ತೆಗಳಲ್ಲಿ ಸಾರ್ವಜನಿಕರು ಕಾನೂನು ಉಲ್ಲಂಘನೆ ಮಾಡಿ, ಓಡಾಟ ಮಾಡುವವರ ಮೇಲೆ ದಂಡವನ್ನು ಹಾಕುತ್ತಿದ್ದು, ಲಾಕ್‌ಡೌನ್ ಘೋಷಣೆ ಆದಾಗಿನಿಂದ ಚಾಲನೆಯಲ್ಲಿ ಇತ್ತು. ಆದರೆ, ಪೊಲೀಸರೂ ಸಹ ಇಂದು ಕಾನೂನು ಉಲ್ಲಂಘನೆ ಮಾಡಿ ಓಡಾಟ ಮಾಡಿದ ಸಾರ್ವಜನಿಕರಿಂದ ಯಾವುದೇ ರೀತಿಯ ದಂಡವನ್ನು ವಿಧಿಸುವುದಕ್ಕೆ ಮುಂದಾಗದೆ ಕೈ ಚೆಲ್ಲಿ ಕುಳಿತಂತೆ ಭಾಸವಾಗಿದೆ.

ಇಂದು ಸಂತೆಯ ದಿನವಾಗಿದ್ದು, ಸಂತೆಯನ್ನು ರದ್ದು ಮಾಡಲಾಗಿದೆ. ಇದರಿಂದಾಗಿ ಅಲ್ಲೊಂದು ಇಲ್ಲೊಂದು ತರಕಾರಿ, ಅಂಗಡಿಗಳು ಮತ್ತು ಔಷಧಿ ಅಂಗಡಿಗಳು ತೆರೆದುಕೊಂಡು ವ್ಯಾಪಾರ ವಹಿವಾಟು ಮಾಡಿದ್ದು ಬಿಟ್ಟರೆ ಉಳಿದೆಲ್ಲ ಅಂಗಡಿಗಳು ಸ್ವಯಂಪ್ರೇರಿತವಾಗಿ ಬಂದ್ ಆಗಿದ್ದವು.

ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪನವರಿಗೆ ಪಾಸಿಟಿವ್ ಬಂದಿದ್ದು, ಅವರು ಕೊಂಡಜ್ಜಿ ಕೋವಿಡ್ ಕೇರ್ ಸೆಂಟರ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅವರ ಸ್ಥಳಕ್ಕೆ ಪ್ರಭಾರಿಯಾಗಿ ಶಶಿಧರ್ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಕೊರೊನಾ ಹಿನ್ನೆಲೆಯಲ್ಲಿ ನಗರದ ಉಪ ನೋಂದಣಿ ಕಚೇರಿಯ ಕಾರ್ಯ ಪ್ರಾರಂಭವಾಗಿದ್ದು, ಸಾರ್ವಜನಿ ಕರು ಹೆಚ್ಚಿನ ಸಂಖ್ಯೆಯಲ್ಲಿ ಇರದೇ ಇರುವುದು ಕಂಡುಬಂದಿತು.

ಪೆಟ್ರೋಲ್ ಬೆಲೆ ಶತಕವನ್ನು ಬಾರಿಸಿದ್ದರೂ ಸಹ ಸಾರ್ವಜನಿಕರ ವಾಹನ ಸವಾರಿ ನಿಂತಿಲ್ಲದಿರುವುದು ನೋಡಿದರೆ ಬೆಲೆ ಏರಿಕೆಯ ಬಿಸಿ ತಲೆಗೆ ಬಡಿದಂತೆ ಕಾಣುತ್ತಿಲ್ಲ.

# ಗೊಬ್ಬರ, ಬೀಜದ ಕೃತಕ ಕೊರತೆ ಮಾಡಿದರೆ ಕ್ರಮ

**(1ನೇ ಪುಟದಿಂದ)** ಲಾಗುತ್ತಿತ್ತು. ಈ ವರ್ಷ ಒಟ್ಟು 16 ಸಾವಿರ ಹೆಕ್ಟೇರ್‌ನಲ್ಲಿ ತೊಗರಿಯನ್ನು ಅಂತರ ಬೆಳೆಯಾಗಿಸಲು ಗುರಿ ಹೊಂದಿದ್ದು, ಸುಮಾರು 1 ಲಕ್ಷ ಕ್ವಿಂಟಾಲ್ ತೊಗರಿ ಉತ್ಪಾದನೆಯ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಮಾತನಾಡಿ, ಮುಂಗಾರು ಹಂಗಾಮಿನಲ್ಲಿ ರೈತರಿಗೆ ಯಾವುದೇ ಬಗೆಯ ಬೀಜ ಹಾಗೂ ಗೊಬ್ಬರದ ಕೊರತೆಯಾಗದಂತೆ, ರೈತರಿಗೆ ಯಾವುದೇ ಅನಾನುಕೂಲವಾಗದಂತೆ ಕೃಷಿ ಸಾಮಗ್ರಿ ಪೂರೈಕೆಗೆ ಸರ್ಕಾರ ಬದ್ಧವಿದೆ ಎಂದರು.

ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಉಪಯುಕ್ತ ಯೋಜನೆಯಾಗಿದ್ದು, ಅಧಿಕಾರಿಗಳು ಯೋಜನೆಯನ್ನು ಹೆಚ್ಚು ಜನರಿಗೆ ತಲುಪಿಸಬೇಕು. ಒಂದು ವರ್ಷ ಹಣ ಬಂದಿಲ್ಲ ಎಂಬ ಕಾರಣಕ್ಕಾಗಿ ಜನ ಕಂತು ಕಟ್ಟುವುದನ್ನು ನಿಲ್ಲಿಸಬಾರದು ಎಂದರು.

ಸಭೆಯಲ್ಲಿ ಶಾಸಕರಾದ ಎಸ್.ಎ. ರವೀಂದ್ರನಾಥ್, ಮಾಡಾಳ್ ವಿರುಪಾಕ್ಷಪ್ಪ, ಎಸ್.ವಿ. ರಾಮಚಂದ್ರ, ಪ್ರೊ. ಲಿಂಗಣ್ಣ, ಮಹಾನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಕೃಷಿ ಇಲಾಖೆ ಅಪರ ಆಯುಕ್ತ ವೆಂಕಟರಾವ್ ಪಾಟೀಲ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿ.ಪಂ. ಸಿಇಒ ಡಾ. ವಿಜಯ ಮಹಾಂತೇಶ್, ಎಸ್ಪಿ ಹನುಮಂತರಾಯ ಮತ್ತಿತರರು ಉಪಸ್ಥಿತರಿದ್ದರು.

## ಬಿಎಸ್‌ವೈಗೆ ತೊಂದರೆ ಕೊಟ್ಟರೆ ಜನ ಉಗಿಯುತ್ತಾರೆ

**(1ನೇ ಪುಟದಿಂದ)** ವಿರೂಪಾಕ್ಷಪ್ಪ ಎಚ್ಚರಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಯಡಿಯೂರಪ್ಪ ಪಕ್ಷವನ್ನು ಕಟ್ಟಿ ಬೆಳೆಸಿದ ಹಿರಿಯರು. ಅವರು ಪೂರ್ಣ ಅಧಿಕಾರ ಮುಗಿಸಲು ವರಿಷ್ಠರು ಹಾಗೂ ಶಾಸಕರು ಅವಕಾಶ ಕೊಟ್ಟರೆ ಒಳ್ಳೆಯ ಹೆಸರು ಬರುತ್ತದೆ ಎಂದರು.

ಒಂದು ಸರ್ಕಾರ ಅಧಿಕಾರಕ್ಕೆ ಬರಲು ಪಕ್ಷ ಎಷ್ಟು ಮುಖ್ಯವೋ, ವ್ಯಕ್ತಿಯೂ ಅಷ್ಟೇ ಮುಖ್ಯ. ನರೇಂದ್ರ ಮೋದಿ ಅವರನ್ನು ಪ್ರಧಾನ ಮಂತ್ರಿ ಅಭ್ಯರ್ಥಿಯಾಗಿ ಘೋಷಿಸದೇ ಇದ್ದರೆ, ಕೇಂದ್ರದಲ್ಲಿ ಪಕ್ಷ ಸ್ಪಷ್ಟ ಬಹುಮತ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಅದೇ ರೀತಿ ಇಲ್ಲಿ ಯಡಿಯೂರಪ್ಪನವರ ಹೆಸರು ಮುಖ್ಯಮಂತ್ರಿ ಸ್ಥಾನಕ್ಕೆ ಘೋಷಿಸದಿದ್ದರೆ 104 ಸ್ಥಾನ ಪಡೆಯಲು ಸಾಧ್ಯವಾಗುತ್ತಿರಲಿಲ್ಲ ಎಂದು ಹೇಳಿದರು.

ಪಕ್ಕದ ತಮಿಳುನಾಡು ಹಾಗೂ ಕೇರಳದಲ್ಲಿ ಇತ್ತೀಚೆಗೆ ವಿಧಾನಸಭಾ ಚುನಾವಣೆ ನಡೆಯಿತು. ಅಲ್ಲಿ ಪಕ್ಷ ಎಷ್ಟು ಸ್ಥಾನ ಗೆದ್ದಿದೆ? ಆಂಧ್ರ ಪ್ರದೇಶದಲ್ಲಿ ಎಷ್ಟು ಸ್ಥಾನ ಗೆದ್ದಿದೆ? ಕರ್ನಾಟಕದಲ್ಲಿ ಯಡಿಯೂ ರಪ್ಪ ಶ್ರಮ ಇರುವುದಕ್ಕೆ ಬಿಜೆಪಿ 104 ಸ್ಥಾನ ಗೆದ್ದಿದೆ ಎಂದವರು ತಿಳಿಸಿದರು. ಸದ್ಯದಲ್ಲೇ ಜಿ.ಪಂ ಹಾಗೂ ತಾ.ಪಂ ಚುನಾವಣೆ ಗಳು ಬರಲಿವೆ. ಅವರ ನೇತೃತ್ವದಲ್ಲೇ ಬಿಜೆಪಿ ಚುನಾವಣೆ ಗೆಲ್ಲಲು ಸಾಧ್ಯವಾ ಗಲಿದೆ. ಹೀಗಾಗಿ ಯಡಿಯೂರಪ್ಪ ಬದಲಾವಣೆಯ ಪ್ರಶ್ನೆಯೇ ಇಲ್ಲ ಎಂದು ವಿರೂಪಾಕ್ಷಪ್ಪ ಹೇಳಿದರು.

## ಬಿಜೆಪಿಯಲ್ಲಿರುವಶೇ.90ರಷ್ಟುಹೊರಗಿನವರೇ

**(1ನೇ ಪುಟದಿಂದ)** ಮನೆಯ ಸೊಸೆ ಆದಂತೆ. ಸೊಸೆ ಬರುವಾಗ ಹೊಸ್ತಿಲಿಗೆ ಮಳೆ ಹೊಡೆದ ಮೇಲೆ ಮಗಳಾಗುವ ರೀತಿಯಲ್ಲೇ, ನಾನು ಬಿಜೆಪಿಯ ಮಗಳಾಗಿದ್ದೇನೆ ಎಂದು ವಿಶ್ಲೇಷಿಸಿದರು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ನಾಯಕತ್ವ ನಂಬಿ ಈ ಪಕ್ಷಕ್ಕೆ ಬಂದಿದ್ದೇವೆ. ಅದೇ ರೀತಿ ಅವರು ಹಾಗೂ ಪಕ್ಷ ಗೌರವಯುತವಾಗಿ ಗೆಲ್ಲಿಸಿ, ಗೌರವ ಸ್ಥಾನ ಕೊಟ್ಟು ಸರಿಯಾಗಿ ನಡೆಸಿಕೊಂಡಿದ್ದಾರೆ ಎಂದರು.

ಮನೆಯಲ್ಲಿ ಅಣ್ಣ - ತಮ್ಮ, ಅಕ್ಕ - ತಂಗಿ ಇರುವಾಗ ಹೆಚ್ಚು ಕಡಿಮೆ ಆಗುವಂತೆ ಪಕ್ಷದಲ್ಲೂ ಆಗುತ್ತಿರುತ್ತದೆ. ಈ ಬಗ್ಗೆ ವರಿಷ್ಠರು ಕ್ರಮ ತಗೆದುಕೊಳ್ಳುತ್ತಾರೆ ಎಂದರು.

ವರಿಷ್ಠರು ಹೇಳಿದರೆ ರಾಜೀನಾಮೆ ನೀಡುತ್ತೇನೆ ಎಂದು ಯಡಿಯೂರಪ್ಪ ಹೇಳುವುದಕ್ಕೆ ಹೆಚ್ಚು ಅರ್ಥ ಕಲ್ಪಿಸಬಾರದು ಎಂದ ಅವರು, ಮುಖ್ಯಮಂತ್ರಿಗಳಿಗೆ ಮೂರು ತಿಂಗಳಿಂದ ಇದೇ ಪ್ರಶ್ನೆ ಕೇಳಲಾಗುತ್ತಿದೆ. ತಲೆ ರೋಸಿ ಹೋಗಿ ಇಂತಹ ಹೇಳಿಕೆ ನೀಡಿರಬಹುದು ಎಂದವರು ವಿಶ್ಲೇಷಿಸಿದರು.

ನಾನು ಪಕ್ಷದ ನಿಷ್ಠಾವಂತ ಕಾರ್ಯಕರ್ತ, ವರಿಷ್ಠರು ಹೇಳಿದಂತೆ ಕೇಳುತ್ತೇನೆ ಎಂದೇ ಮುಖ್ಯಮಂತ್ರಿ ಹೇಳಿದ್ದಾರೆ. ಮುಖ್ಯಮಂತ್ರಿಗಳ ನಿರ್ಧಾರಕ್ಕೆ ನಾವೆಲ್ಲರೂ ಬದ್ಧವಾಗಿರುತ್ತವೆ ಎಂದವರು ತಿಳಿಸಿದರು.

# ಆಗಸ್ಟ್ 28ರಿಂದ ಸಿಇಟಿ ಪರೀಕ್ಷೆ ನಡೆಸಲು ನಿರ್ಧಾರ

**(1ನೇ ಪುಟದಿಂದ)** ಎಂದರು. ಸಿಇಟಿ, ನೀಟ್ ಸೇರಿದಂತೆ ರಾಜ್ಯದಲ್ಲಿ ನಡೆಯುವ ಎಲ್ಲ ವೃತ್ತಿಪರ ಕೋರ್ಸುಗಳಿಗೆ ಪಿಯುಸಿ ಅಂಕವನ್ನು ಪರಿಗಣನೆ ಮಾಡದಿರಲು ನಿರ್ಧರಿಸಲಾಗಿದೆ. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಖಾತೆ ಸಚಿವ ಎಸ್.ಸುರೇಶ್ ಕುಮಾರ್ ಅವರು ಈ ನಿಟ್ಟಿನಲ್ಲಿ ನೀಡಿದ್ದ ಸಲಹೆಯನ್ನು ಪರಿಗಣಿಸಲಾಗಿದೆ ಎಂದು ಅವರು ಹೇಳಿದರು.

ಎಲ್ಲ ಐಚ್ಛಿಕ ವಿಷಯಗಳ ಪರೀಕ್ಷೆ 28 ಮತ್ತು 29ರಂದು ನಡೆಯುತ್ತದೆ. ಉಳಿದಂತೆ ಹೊರನಾಡು ಮತ್ತು ಗಡಿನಾಡು ಕನ್ನಡಿಗ ಅಭ್ಯರ್ಥಿಗಳಿಗೆ ಆಗಸ್ಟ್ 30ರಂದು ಪರೀಕ್ಷೆ ನಡೆಯಲಿದೆ. ಮೊದಲು ಯಾವ ಪದ್ಧತಿಯಲ್ಲಿ ಪರೀಕ್ಷೆ ನಡೆಯುತ್ತಿತ್ತೋ ಅದೇ ರೀತಿ ಪರೀಕ್ಷೆ ನಡೆಯುತ್ತದೆ. ಪ್ರತಿ ವಿಷಯಕ್ಕೆ 60 ಅಂಕ ಇರುತ್ತದೆ. ಮೊದಲ ದಿನ ಗಣಿತ ಮತ್ತು ಜೀವವಿಜ್ಞಾನ ಹಾಗೂ ಎರಡನೇ ದಿನ ಭೌತವಿಜ್ಞಾನ ಮತ್ತು ರಾಸಾಯನಿಕ ವಿಜ್ಞಾನ ಇರುತ್ತದೆ ಎಂದರು ಅವರು.

ಸಿಇಟಿಯಲ್ಲಿ ಎಂಜಿನಿಯರಿಂಗ್, ಪಶುವೈದ್ಯ, ಕೃಷಿ ವಿಜ್ಞಾನ, ಆರ್ಕಿಟೆಕ್ಟ್, ಫಾರ್ಮಸಿ ಪ್ರವೇಶ ಪರೀಕ್ಷೆಗೆ ಇದ್ದ ಅರ್ಹ ಅಂಕಗಳ ಷರತ್ತನ್ನು ತೆಗೆದು ಹಾಕಲಾಗಿದೆ. ಕೇವಲ ಸಿಇಟಿ ಅಂಕಗಳ ಆಧಾರದ ಮೇಲೆ ಮಾತ್ರ ರ‍್ಯಾಂಕ್ ಕೊಡಲಾಗುವುದು. ವೃತ್ತಿಪರ ಎಂಜಿನಿಯರಿಂಗ್ ಕೋರ್ಸ್‌ಗೆ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತ ವಿಷಯಗಳಲ್ಲಿ ಸಿಇಟಿ ಬರೆಯಲು ಸಾಮಾನ್ಯ ಅಭ್ಯರ್ಥಿಗಳು ಕನಿಷ್ಠ ಶೇ.45 ಹಾಗೂ ಪರಿಶಿಷ್ಟ ಜಾತಿ-ವರ್ಗದ ಅಭ್ಯರ್ಥಿಗಳು ಶೇ.40ರಷ್ಟು ಅಂಕಗಳನ್ನು ಗಳಿಸಬೇಕೆಂಬ ಷರತ್ತು ಇತ್ತು. ಆದರೆ ಈಗ ಬದಲಿಸಿದ್ದು, ಪಿಸಿಎಂ ಹಾಗೂ ನಿಗದಿತ ಐಚ್ಛಿಕ ವಿಷಯಗಳಲ್ಲಿ ಉತ್ತೀರ್ಣರಾಗಿರುವ ಎಲ್ಲ, ಅಂದರೆ ಜಸ್ಟ್ ಪಾಸ್ ಆಗಿರುವ ವಿದ್ಯಾರ್ಥಿಗಳು ಕೂಡ ಸಿಇಟಿ ಬರೆಯಲು ಅರ್ಹತೆ ಹೊಂದಿರುತ್ತಾರೆ. ಅಂಕಗಳ ಮಿತಿ ಸಡಿಲಿಕೆ ಮಾಡಿರುವ ಬಗ್ಗೆ ಎಲ್ಲ ಸಂಬಂಧಿತ ಪರೀಕ್ಷಾ ಮಂಡಳಿಗಳು, ಇನ್ನಿತರೆ ಸಂಬಂಧಿತ ಎಲ್ಲ ಸಂಸ್ಥೆಗಳಿಗೆ ಸರಕಾರ ಪತ್ರ ಬರೆಯಲಿದೆ ಎಂದು ಡಿಸಿಎಂ ಇದೇ ವೇಳೆ ತಿಳಿಸಿದರು.

ಎಂಜಿನಿಯರಿಂಗ್ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕೆ ರ‍್ಯಾಂಕ್ ನಿರ್ಧರಿಸಲು ಪ್ರಸ್ತುತ ನಿಯಮದಲ್ಲಿ ಇರುವಂತೆ ಅರ್ಹತಾ ಪರೀಕ್ಷೆ ಮತ್ತು ಸಿಇಟಿ ಪರೀಕ್ಷೆಯಲ್ಲಿ ಪಡೆದ ಪಿಸಿಎಂ ವಿಷಯಗಳ ಅಂಕಗಳನ್ನು ಸಮನಾಗಿ ಪರಿಗಣಿಸಿ, ಸಿಇಟಿ ರ‍್ಯಾಂಕ್ ನೀಡಲಾಗುತ್ತಿತ್ತು.

ಅದರ ಬದಲಿಗೆ ಈಗ ಕೇವಲ ಸಿಇಟಿ ಪರೀಕ್ಷೆಯಲ್ಲಿನ ಪಿಸಿಎಂ ವಿಷಯಗಳಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳನ್ನು ಮಾತ್ರ ಪರಿಗಣಿಸಿ ಎಂಜಿನಿಯರಿಂಗ್ ರ‍್ಯಾಂಕ್ ಕೊಡಲಾಗುವುದು. ಈ ಬದಲಾವಣೆ 2021-22ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಮಾತ್ರ ಅನ್ವಯವಾಗುತ್ತದೆ ಎಂದು ಡಾ. ಅಶ್ವತ್ಥನಾರಾಯಣ ಹೇಳಿದರು. ಸಿಇಟಿ ಬರೆಯಲಿಚ್ಛಿಸುವ ವಿದ್ಯಾರ್ಥಿಗಳು ಜೂನ್ 15ರಿಂದಲೇ ಆನ್‌ಲೈನ್ ಮೂಲಕ ರಿಜಿಸ್ಟ್ರೇಷನ್ ಮಾಡಿಕೊಳ್ಳಬೇಕು ಎಂದು ಅವರು ಮಾಹಿತಿ ನೀಡಿದರು.

ಇದೇ ವೇಳೆ ನೀಟ್‌ನಲ್ಲಿ ಇಂತಿಷ್ಟು ಅಂಕ ಗಳಿಸಿದರೆ ಮಾತ್ರ ವೈದ್ಯ ಕೋರ್ಸುಗಳಿಗೆ ಪ್ರವೇಶ ಇದೆ. ಅದೇ ಪದ್ಧತಿಯನ್ನು ಸಿಇಟಿ ಯಲ್ಲೂ ತರುವ ಉದ್ದೇಶವಿದ್ದು, ಪರಿಶೀಲನೆ ನಡೆಸಲಾಗುತ್ತಿದೆ. ಗುಣಮಟ್ಟದ ದೃಷ್ಟಿಯಲ್ಲಿ ಸರ್ಕಾರ ಈ ನಿಟ್ಟಿನಲ್ಲಿ ಚಿಂತಿಸುತ್ತಿದೆ. ಪಾಸಾದವರೆಲ್ಲ ಎಂಜಿನಿಯರಿಂಗ್ ಸೇರುತ್ತಿದ್ದಾರೆ. ಆದ್ದರಿಂದ ಗುಣಮಟ್ಟಕ್ಕೆ ಧಕ್ಕೆಯಾಗುತ್ತಿದೆ ಎಂದವರು ಹೇಳಿದರು.

ಉನ್ನತ ಶಿಕ್ಷಣ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಕುಮಾರ್ ನಾಯಕ್, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ವೆಂಕಟರಾಜ್, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಪಿ. ಪ್ರದೀಪ್ ಅವರು ಸಭೆಯಲ್ಲಿ ಹಾಜರಿದ್ದರು.

2021ನೇ ಸಾಲಿನಲ್ಲಿ ಪಿಯುಸಿಯ ಎಲ್ಲ ವಿದ್ಯಾರ್ಥಿಗಳು ಪಾಸಾಗಿದ್ದಾರೆ. 6ರಿಂದ 7ಲಕ್ಷ ವಿದ್ಯಾರ್ಥಿಗಳು ಪಿಯುಸಿಯಿಂದ ಹೊರಬರುತ್ತಿದ್ದಾರೆ. ಮೊದಲು ಕೊನೆ ಪಕ್ಷ 4 ಲಕ್ಷ ಅಥವಾ ಅದಕ್ಕಿಂತ ಸ್ವಲ್ಪ ಹೆಚ್ಚು ವಿದ್ಯಾರ್ಥಿಗಳು ಮಾತ್ರ ಪಾಸಾಗುತ್ತಿದ್ದರು. ಈ ಬಾರಿ ಶೇ.30ರಷ್ಟು ಹೆಚ್ಚು ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಿದ್ದಾರೆ. ಇವರಲ್ಲಿ ಅನೇಕರು ಪದವಿ ಕಾಲೇಜುಗಳಿಗೆ ಸೇರಲಿದ್ದು, ಅಲ್ಲಿನ ವ್ಯವಸ್ಥೆ ಹೆಚ್ಚಿಸುವ ಕೆಲಸ ಮಾಡಲಾಗುವುದು ಎಂದು ಡಾ. ಅಶ್ವತ್ಥನಾರಾಯಣ ಮಾಹಿತಿ ನೀಡಿದರು.

ವಿಜ್ಞಾನ ವಿಭಾಗದಲ್ಲಿ ಗುಣಮಟ್ಟಕ್ಕೆ ಆದ್ಯತೆ ಕೊಡುವ ಉದ್ದೇಶದಿಂದ ಅದಕ್ಕೆ ಸಂಬಂಧಿಸಿದ ಎಲ್ಲ ಪದವಿ ಕೋರ್ಸುಗಳಿಗೆ ಸಿಇಟಿ ಅಂಕಗಳನ್ನು ಆಧರಿಸಿಯೇ ಪ್ರವೇಶ ನೀಡುವ ಯೋಚನೆ ಮಾಡಲಾಗುತ್ತಿದೆ. ಈ ಬಗ್ಗೆ ವಿಸ್ತೃತವಾಗಿ ಚಿಂತಿಸಲಾಗುತ್ತಿದೆ. ಯಾವುದೂ ಅಂತಿಮವಾಗಿಲ್ಲ ಎಂದು ಅವರು ಹೇಳಿದರು.

# ಬೀದಿ ವ್ಯಾಪಾರಿಗಳಿಗೆ 2,000 ರೂ.

**(1ನೇ ಪುಟದಿಂದ)** ಬೀಟಿ ಮತ್ತು ಮಾರಾಟ ಪ್ರಮಾಣ ಪತ್ರವನ್ನು ವಿತರಿಸಿ, ಬೀದಿ ವ್ಯಾಪಾರ ಕೈಗೊಳ್ಳುವ ಸ್ಥಳದಲ್ಲಿ ಮೂಲಭೂತ ಸೌಕರ್ಯವನ್ನು ಕಲ್ಪಿಸಲಾಗಿದೆ. ಅಂತೆಯೇ, ಸಾಮಾಜಿಕ ಭದ್ರತಾ ಯೋಜನೆಗಳ ಸೌಲಭ್ಯವನ್ನು ಪಡೆಯಲು ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ ಎಂದವರು ಹೇಳಿದರು.

ಕೊರೊನಾ ಮೊದಲನೇ ಅಲೆಯ ಸಂದರ್ಭದಲ್ಲಿ ಜೀವನೋಪಾಯ ನಿರ್ವಹಣೆಗೆ ಸಂಕಷ್ಟಕ್ಕೊಳಗಾದ ಬೀದಿಬದಿ ವ್ಯಾಪಾರಿಗಳಿಗೆ ಪ್ರಧಾನಮಂತ್ರಿ ಬೀದಿ ವ್ಯಾಪಾರಿಗಳ ಆತ್ಮನಿರ್ಭರ್ ನಿಧಿ ಯೋಜನೆಯಡಿ ಪ್ರತಿ ಬೀದಿ ಬದಿ ವ್ಯಾಪಾರಿಗಳಿಗೆ 10,000 ರೂ. ಗಳ ವರೆಗೆ ಬ್ಯಾಂಕ್ ಮೂಲಕ ಕಿರುಸಾಲ ಸೌಲಭ್ಯವನ್ನು ಒದಗಿಸಲಾಗಿದೆ. ಈವರೆವಿಗೂ ಯೋಜನೆಯಡಿ 107.92 ಕೋಟಿ ರೂ. ಗಳಷ್ಟು ಸಾಲವನ್ನು ವಿತರಿಸಲಾಗಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ರಾಜ್ಯದಲ್ಲಿ ಎರಡನೇ ಕೊರೊನಾ ಅಲೆಯ ಸಂದರ್ಭದಲ್ಲಿ ವಿಧಿಸಲಾದ ನಿರ್ಬಂಧಗಳಿಂದ ಸಂಕಷ್ಟಕ್ಕೊಳಗಾದ ಬೀದಿಬದಿ ವ್ಯಾಪಾರಿಗಳಿಗೆ ವಿಶೇಷ ಪ್ಯಾಕೇಜ್‌ನಡಿ ತಲಾ 2,000 ರೂ. ಆರ್ಥಿಕ ನೆರವನ್ನು ಘೋಷಿಸಲಾಗಿತ್ತು. ಅದರಂತೆ, 2,16,439 ಫಲಾನುಭವಿಗಳ ಪೈಕಿ ಆಧಾರ ಜೋಡಣೆಯಾಗಿರುವ 1,91,684 ಫಲಾನುಭವಿಗಳ ಬ್ಯಾಂಕ್ ಖಾತೆಗೆ ಸಹಾಯಧನವನ್ನು ನೇರ ನಗದು ವರ್ಗಾವಣೆ (ಡಿಬಿಟಿ) ವಿಧಾನದ ಮೂಲಕ ಒಟ್ಟು ಸಹಾಯಧನ 38.33 ಕೋಟಿ ರೂ.ಗಳನ್ನು ವರ್ಗಾಯಿಸಲಾಗುತ್ತಿದೆ ಎಂದು ಮುಖ್ಯಮಂತ್ರಿಗಳು ಹೇಳಿದರು.

ವ್ಯಾಪಾರಿಗಳು ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಈ ಪ್ಯಾಕೇಜ್‌ನಡಿ ಬಿಡುಗಡೆ ಮಾಡಿರುವ ಸಹಾಯಧನವನ್ನು ಬೀದಿಬದಿ ವ್ಯಾಪಾರಿಗಳ ಯಾವುದೇ ಸಾಲಕ್ಕೆ ಸರಿದೂಗಿಸಬಾರದೆಂದು, ಈಗಾಗಲೇ ಸಂಬಂಧಿಸಿದ ಬ್ಯಾಂಕಿನವರಿಗೆ ನಿರ್ದೇಶನ ನೀಡಲಾಗಿದೆ ಎಂದು ಮುಖ್ಯಮಂತ್ರಿಗಳು ಸ್ಪಷ್ಟಪಡಿಸಿದರು.



## ಆರನೇ ವರ್ಷದ ಪುಣ್ಯಸ್ಮರಣೆ



ದಿ|| ಶರಣೆ ಶ್ರೀಮತಿ
ಕಾಯಕ ಯೋಗಿ ಚನ್ನಬಸಮ್ಮ
(ಶ್ರೀ ದಿ|| ಕರಿಯಪ್ಪ ದುಂಡಜ್ಜನವರ ಧರ್ಮಪತ್ನಿ)
ನೀವು ನಮ್ಮನ್ನಗಲಿ ಇಂದಿಗೆ
ಆರು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ
ಮಕ್ಕಳು, ಮೊಮ್ಮಕ್ಕಳು,
ಸೊಸೆಯಂದಿರು, ಸಹೋದರ,
ಸಹೋದರಿಯರು ಮತ್ತು
ಬಂಧು-ಮಿತ್ರರು, ದಾವಣಗೆರೆ.

## ಭಾವಪೂರ್ಣ ಶ್ರದ್ಧಾಂಜಲಿ


ದಿನಾಂಕ 02.06.2021ರಂದು
ನಿಧನರಾದ
**ಶ್ರೀ ಟಿ.ಹೆಚ್. ಬಕ್ಕೇಶ್ ಹೊಸಮನಿ**



ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.


✦ ಶ್ರೀ ಕೊಟ್ಟೂರೇಶ್ವರ ಟ್ರೇಡಿಂಗ್ ಕಂಪನಿ
✦ ಶ್ರೀ ಎ. ರವೀಂದ್ರನಾಥ್ ಅರಳಗುಪ್ಪಿ
✦ ಶ್ರೀ ದುರುದುಂಡೀಶ್ವರ ಟ್ರೇಡರ್ಸ್
✦ ಶ್ರೀ ಮಹಾಂತೇಶ್ವರ ಟ್ರೇಡರ್ಸ್ ✦ ಶ್ರೀ ಕಣವಿ ಸಂಜಯ್
✦ ಶ್ರೀ ಪರಮೇಶ್ವರಪ್ಪ ಅರಳಗುಪ್ಪಿ, ದಾವಣಗೆರೆ.


## ಹರಪನಹಳ್ಳಿಯ ಶಾಲಾ ಶಿಕ್ಷಕ ನಿಧನ



ಹರಪನಹಳ್ಳಿ, ಜೂ.8- ತೆಲಿಗಿ ಸರ್ಕಾರಿ ಪ್ರೌಢ ಶಾಲೆಯ ಶಿಕ್ಷಕ ಬಿ. ದೇವರಾಜಚಾರಿ ಅಕಾಲಿಕವಾಗಿ ಇಂದು ನಿಧನರಾಗಿದ್ದಾರೆ. ಅವರ ನಿಧನಕ್ಕೆ ಶಿಕ್ಷಣಾಧಿಕಾರಿ ಎಸ್.ಎಂ. ವೀರಭದ್ರಯ್ಯ, ಸರ್ಕಾರಿ ನೌಕರರ ಒಕ್ಕೂಟದ ಅಧ್ಯಕ್ಷ ಎಂ. ಆಂಜನೇಯ, ನಿವೃತ್ತ ಮುಖ್ಯ ಶಿಕ್ಷಕ ಎಂ. ಆನಂದಪ್ಪ, ಶಿಕ್ಷಕರುಗಳಾದ ಎನ್.ಜಿ. ಮನೋಹರ್, ಎನ್.ಟಿ. ಸೋಮಣ್ಣ, ಸಿ. ಗಂಗಾಧರ, ಚಂದ್ರಶೇಖರ್, ಮೂರ್ತಿನಾಯ್ಕ್, ಸಂಗಯ್ಯ, ಕೆ. ಬಸವರಾಜ್, ಎಂ. ಕೊಟ್ರೇಶ್, ಕೆ. ಧರ್ಮನಾಯ್ಕ, ಯಂಕಾನಾಯ್ಕ, ಪಿ. ವಿರುಪಾಕ್ಷಪ್ಪ, ಕೆ.ನಾಗಮ್ಮ ಸಂತಾಪ ವ್ಯಕ್ತಪಡಿಸಿದ್ದಾರೆ.


## ಕಕ್ಕರಗೊಳ್ಳದ ಅಲ್ದಿ ರತ್ನಮ್ಮ (ಕೆ.ಎ. ರತ್ನಮ್ಮ) ನಿಧನ



ದಾವಣಗೆರೆ ಎಸ್.ಎಸ್. ಬಡಾವಣೆ
'ಬಿ' ಬ್ಲಾಕ್ ವಾಸಿ
ದಿ|| ಶ್ರೀ ಕೆ.ಎ. ಕೊಟ್ರಪ್ಪನವರ
ಧರ್ಮಪತ್ನಿ
**ಶ್ರೀಮತಿ ಕೆ.ಎ. ರತ್ನಮ್ಮ**
ಇವರು ದಿನಾಂಕ 08.06.2021ರ
ಮಂಗಳವಾರ ಬೆಳಗ್ಗೆ 9.10 ಕ್ಕೆ
ಸ್ವಗೃಹದಲ್ಲಿ ದೈವಾಧೀನರಾಗಿದ್ದಾರೆ
ಎಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 86 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 08.06.2021ರ ಮಂಗಳವಾರ ಮಧ್ಯಾಹ್ನ 2.00 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ಇಂತಿ ದುಃಖತಪ್ತರು: **ಕೆ.ಎ ಬಸವರಾಜ, ಕೆ.ಎ. ವಿಶ್ವನಾಥ, ಅಲ್ದಿ ಕುಟುಂಬದವರು ಹಾಗೂ ಬಂಧು-ಮಿತ್ರರು.**


# 6 ಸಾವಿರ ಕೊರೊನಾ ಟೆಸ್ಟ್‌ಗೆ ಭೈರತಿ ಸೂಚನೆ

**(1ನೇ ಪುಟದಿಂದ)** ಗುರಿಗಿಂತಲೂ ಹೆಚ್ಚು ಹೆಚ್ಚು ಕೋವಿಡ್ ಟೆಸ್ಟ್ ಕೈಗೊಳ್ಳಲಾಗುವುದು ಎಂದರು.

ದಾವಣಗೆರೆ ತಾಲ್ಲೂಕಿನಲ್ಲಿ 800ಕ್ಕೂ ಹೆಚ್ಚು ಕೊರೊನಾ ಸೋಂಕಿತರು ಈಗಲೂ ಹೋಂ ಐಸೋಲೇಷನ್‌ನಲ್ಲಿ ಇರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಭೈರತಿ, ಸೋಂಕು ತಡೆಗಾಗಿ ಹೋಂ ಐಸೋಲೇಷನ್ ತಡೆಯಬೇಕು ಎಂದು ತಿಳಿಸಿದರು.


ಈಗಲೂ ಪ್ರತಿದಿನ 400ರಷ್ಟು ಕೊರೊನಾ ಸೋಂಕಿತರು ಕಂಡು ಬರುತ್ತಿದ್ದಾರೆ, ಸಾವಿನ ಪ್ರಮಾಣವೂ ಹೆಚ್ಚಾಗುತ್ತಿದೆ. ಸೋಂಕು ಹಾಗೂ ಸಾವುಗಳ ತಡೆಗೆ ಕ್ರಮ ತೆಗೆದುಕೊಳ್ಳಬೇಕು. ಗ್ರಾಮಾಂತರದಲ್ಲಿ ಹೆಚ್ಚು ಸೋಂಕಿತರು ಕಂಡು ಬರುತ್ತಿದ್ದು, ಆ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದು ಹೇಳಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ಜಿಲ್ಲೆಗೆ ಬರುತ್ತಿರುವ ಲಸಿಕೆಗಳನ್ನು ಹೆಚ್ಚು ಕೇಂದ್ರಗಳ ಮೂಲಕ ವಿತರಿಸಲಾಗುತ್ತಿದೆ. ನಗರದಲ್ಲಿ 9 ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು 9 ಹೆಚ್ಚುವರಿ ಕೇಂದ್ರಗಳ ಮೂಲಕ ನೀಡಲಾಗಿದೆ. ದಾವಣಗೆರೆ ನಗರ ಹಾಗೂ ಗ್ರಾಮಾಂತರಲ್ಲಿ ಒಂದೇ ದಿನ 7,600 ಲಸಿಕೆ ನೀಡಲಾಗಿದೆ. ಈಗ ಬಂದಿರುವ 10 ಸಾವಿರ ಲಸಿಕೆಗಳಲ್ಲಿ ಬಹಳಷ್ಟನ್ನು ಒಂದೇ ದಿನದಲ್ಲಿ ನೀಡಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಭೆಗೆ ಮಾಹಿತಿ ನೀಡಿದ ಡಿ.ಹೆಚ್.ಓ. ಡಾ. ನಾಗರಾಜ್, ಜಿಲ್ಲೆಯಲ್ಲಿ 18 ವರ್ಷದೊಳಗಿನ 7 ಲಕ್ಷ ಮಕ್ಕಳಿದ್ದಾರೆ. ಮೂರನೇ ಅಲೆ ಬಂದರೆ, ಇವರಿಗೆ ಶೇ.10ರಷ್ಟು ಮಕ್ಕಳಿಗೆ ಸೋಂಕು ಸಾಧ್ಯತೆ ಇದೆ. ಇವರಿಗೆ 250 ಬೆಡ್‌ಗಳು ಬೇಕಾಗಬಹುದು ಎಂದು ಅಂದಾಜಿಸಲಾಗಿದೆ. ಜುಲೈ ಅಂತ್ಯದ ವೇಳೆಗೆ ಮೂರನೇ ಅಲೆ ಸಾಧ್ಯತೆ ಇದ್ದು, ಈ ಬಗ್ಗೆ ಕ್ರಮ ವಹಿಸಲಾಗುತ್ತಿದೆ ಎಂದರು.

ಸಭೆಯಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರಾದ ಎಸ್.ಎ. ರವೀಂದ್ರನಾಥ್, ಮಾಡಾಳ್ ವಿರುಪಾಕ್ಷಪ್ಪ, ಪ್ರೊ. ಲಿಂಗಣ್ಣ, ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಜಿ.ಪಂ. ಸಿಇಒ ಡಾ. ವಿಜಯ ಮಹಾಂತೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.


## ಮಲ್ಲನಾಯ್ಕನಹಳ್ಳಿ ಗ್ರಾಮದ ಬಾಳಪ್ಪರ ಬಸವಂತಪ್ಪ ನಿಧನ



ಹರಿಹರ ತಾಲ್ಲೂಕು ಮಲ್ಲನಾಯ್ಕನಹಳ್ಳಿ ಗ್ರಾಮದ ವಾಸಿ **ಬಾಳಪ್ಪರ ಬಸವಂತಪ್ಪ** (82 ವರ್ಷ) ಅವರು ದಿನಾಂಕ 08.06.2021ರ ಮಂಗಳವಾರ ರಾತ್ರಿ 10 ಗಂಟೆಗೆ ನಿಧನರಾದರು. ಪತ್ನಿ, ಗುತ್ತಿಗೆದಾರ ಅಶೋಕ್ ಸೇರಿದಂತೆ ಏಳು ಜನ ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 09.06.2021ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಮಲ್ಲನಾಯ್ಕನಹಳ್ಳಿ ಗ್ರಾಮದಲ್ಲಿ ನೆರವೇರಲಿದೆ.


## ಉದಾಸಿ ನಿಧನಕ್ಕೆ ದೇವರಮನೆ ಶೋಕ

ದಾವಣಗೆರೆ, ಜೂ.8- ಮಾಜಿ ಸಚಿವ ಸಿ.ಎಂ. ಉದಾಸಿ ಅವರ ನಿಧನಕ್ಕೆ ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ದೇವರಮನೆ ಶಿವಕುಮಾರ್ ಶೋಕ ವ್ಯಕ್ತಪಡಿಸಿದ್ದಾರೆ.

ಉದಾಸಿ ನಿಧನದಿಂದಾಗಿ ಸಾತ್ವಿಕ, ದಕ್ಷ - ಪ್ರಾಮಾಣಿಕ ರಾಜಕಾರಣಿಯೊಬ್ಬರನ್ನು ನಾಡು ಕಳೆದುಕೊಂಡಾಗಿದೆ ಎಂದು ಅವರು ಕಂಬನಿ ಮಿಡಿದಿದ್ದಾರೆ.

# ಸಾಮಾಜಿಕ ಸೇವೆ ಮತ್ತು ನೊಂದವರ ನೆರವಿಗಾಗಿ ಶ್ರೀನಿವಾಸ್ ಅಭಿಮಾನಿ ಬಳಗ ಸ್ಥಾಪನೆ

# ನಿರಂತರ ಜನ ಸೇವೆಯಲ್ಲಿ ನಂದಿಗಾವಿ ಶ್ರೀನಿವಾಸ್





ದಾವಣಗೆರೆ ನಗರದ ಹೊರ ವಲಯದಲ್ಲಿ ಅಲೆಮಾರಿ ಕುಟುಂಬದವರಿಗೆ ಕಾಗಿನೆಲೆ ಶ್ರೀಗಳ ಸಮ್ಮುಖದಲ್ಲಿ ಫುಡ್ ಕಿಟ್ ವಿತರಣೆ.



ಬಾಗಲಕೋಟೆ ಜಿಲ್ಲೆ ಬಾದಾಮಿಯಲ್ಲಿ ಅತಿವೃಷ್ಟಿ ವೇಳೆ ಜನತೆಗೆ ಅಗತ್ಯ ವಸ್ತುಗಳ ವಿತರಣೆ.



ಹರಿಹರ ನಗರದಲ್ಲಿ ಬಡವರಿಗೆ ಫುಡ್‌ಕಿಟ್ ವಿತರಣೆ.



ಕಳೆದ ವರ್ಷ ಸಚಿವ ಕೆ.ಎಸ್. ಈಶ್ವರಪ್ಪ ಅವರ ಸಮ್ಮುಖದಲ್ಲಿ ಫುಡ್ ಕಿಟ್ ವಿತರಣೆ.

✍ ಜಿಗಳಿ ಪ್ರಕಾಶ್

ದೀಪ ತಾನು ಉರಿದು, ಇತರರಿಗೆ ಬೆಳಕು ನೀಡುತ್ತದೆ... ಮರ ತನ್ನಲ್ಲಿ ಬೆಳೆದ ಹಣ್ಣುಗಳನ್ನು ತಾನು ಇಟ್ಟುಕೊಳ್ಳದೆ ಇತರರಿಗೆ ಧಾರೆ ಎರೆಯುತ್ತದೆ... ಮುದುಡುವ ಮುನ್ನ ಹೂವು ತನ್ನ ಮಕರಂದವನ್ನು ಕೀಟಗಳಿಗೆ, ಸುಗಂಧವನ್ನು ಮಾನವನಿಗೆ ನೀಡುತ್ತದೆ... ಅದೇ ರೀತಿ ವಿದೇಶದಲ್ಲಿನ ಐಷಾರಾಮಿ ಬದುಕು ತೊರೆದು, ತಾಯ್ನಾಡಿನ ಜನರ ಕಷ್ಟಗಳಿಗೆ ಸ್ಪಂದಿಸುತ್ತಾ, ಸಾಮಾಜಿಕ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು ಹರಿಹರ ತಾಲ್ಲೂಕಿನ ನಂದಿಗಾವಿ ಗ್ರಾಮದ ಎನ್.ಎಚ್. ಶ್ರೀನಿವಾಸ್ ಅವರು.

ನಂದಿಗಾವಿ ಗ್ರಾಮದ ದಿ. ಗುತ್ತೆಪ್ಪರ ಹನುಮಂತಪ್ಪ ಮತ್ತು ಶ್ರೀಮತಿ ಕಮಲಮ್ಮ ಇವರ ಹಿರಿಯ ಪುತ್ರರಾದ ಎನ್.ಹೆಚ್. ಶ್ರೀನಿವಾಸ್ ಅವರು, ಭದ್ರಾವತಿಯ ಎಂಪಿಎಂ ಶಾಲೆಯಲ್ಲಿ ಪ್ರೌಢ ಶಿಕ್ಷಣ, ಹರಿಹರದ ಎಸ್.ಜಿ.ವಿ.ಪಿ ಕಾಲೇಜಿನಲ್ಲಿ ಪಿಯುಸಿ ಹಾಗೂ ಪದವಿ ಶಿಕ್ಷಣ ಪಡೆದರು. ಆಗಿನಿಂದಲೇ ಸಾಮಾಜಿಕ ಕಾರ್ಯಗಳಲ್ಲಿ ಅಭಿರುಚಿ ಇದ್ದ ಶ್ರೀನಿವಾಸ್ 2000ನೇ ಇಸವಿಯಲ್ಲಿ ಹರಿಹರ ಜ್ಯೂನಿಯರ್ ಛೇಂಬರ್ (ಜೆಸಿ) ಸಂಸ್ಥಾಪಕ ಅಧ್ಯಕ್ಷರಾದರು. ಆಗ ತಾಲ್ಲೂಕಿನಲ್ಲಿ ಮೊದಲ ಬಾರಿಗೆ ರಕ್ತದಾನ ಶಿಬಿರ, ಉಚಿತ ನೇತ್ರ ಪರೀಕ್ಷೆ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರಗಳನ್ನು ನಡೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

2003ರಲ್ಲಿ ಉದ್ಯೋಗ ಅರಸಿ ಜಗತ್ತಿನ ವಾಣಿಜ್ಯ ನಗರಿ ಹಾಂಕಾಂಗ್ ಗೆ ಪಯಣಿಸಿ, ಅಲ್ಲಿ ಹದಿಮೂರುವರೆ ವರ್ಷಗಳ ಕಾಲ ಲಕ್ಷ, ಲಕ್ಷ ಸಂಬಳ ಕೊಡುವ ಗಾರ್ಮೆಂಟ್ ಕ್ಷೇತ್ರದಲ್ಲಿದ್ದರು. ಯೂರೋಪ್ ಮತ್ತು ಅಮೆರಿಕಾದ 28 ದೇಶಗಳಿಗೆ ನಿರಂತರ ಸುತ್ತಾಟದೊಂದಿಗೆ ಹೈಕ್ಲಾಸ್ ಆಗಿ ಜೀವನ ನಡೆಯುತ್ತಿತ್ತು. ಇಂತಹ ಐಷಾರಾಮಿ ಜೀವನದ ನಡುವೆಯೂ ಶ್ರೀನಿವಾಸ್ ಅವರು 2017ರಲ್ಲಿ ಭಾರತಕ್ಕೆ ಮರಳಿದರು. ಇವರು ಭಾರತಕ್ಕೆ ಮರಳಲು ಒಂದು ಪ್ರಬಲ ಕಾರಣವೆಂದರೆ, ತಮ್ಮ ಮಕ್ಕಳು ಪ್ರಾಥಮಿಕ, ಪ್ರೌಢ ಶಿಕ್ಷಣವನ್ನು ಭರತ ಭೂಮಿಯಲ್ಲೇ ಪಡೆಯಲಿ ಎಂದು. ತಾವು ಸರಕಾರಿ ಹಾಗೂ ಸಾಧಾರಣ ಶಾಲಾ, ಕಾಲೇಜುಗಳಲ್ಲಿ ಪಡೆದ ಶಿಕ್ಷಣದ ಮಹತ್ವ ಅರಿತಿರುವ ಇವರು, ತಮ್ಮ ಮಕ್ಕಳು ಟೊಳ್ಳಾದ ಪಾಶ್ಚಾತ್ಯ ಸಂಸ್ಕೃತಿ ಬಿತ್ತುವ ವಿದೇಶದ ಶಾಲೆಗಳಲ್ಲಿ ಶಿಕ್ಷಣ ಪಡೆಯಬಾರದು, ಭಾರತೀಯ ಸಂಸ್ಕೃತಿ, ಪರಂಪರೆ ಮೈಗೂಡಿಸಿಕೊಳ್ಳಲಿ ಎಂಬ ಹಂಬಲ ಇವರನ್ನು ಭಾರತಕ್ಕೆ ಬರುವಂತೆ ಮಾಡಿತು. ಇವರು ತಮ್ಮ ಓರ್ವ ಮಗಳ ಹೆಸರನ್ನು ಸಂಸ್ಕೃತಿ ಎಂದೇ ಇಟ್ಟಿದ್ದಾರೆ. ಮಗ ಶ್ರೀನಂದನ್.

ಪತ್ನಿ ಡಾ. ಶಿಲ್ಪ ಅವರೂ ಕೂಡಾ ಶ್ರೀನಿವಾಸ್ ಅವರ ಹಂಬಲ ಬೆಂಬಲಿಸಿ, ಭಾರತಕ್ಕೆ ವಾಪಸ್ಸಾಗಲು ಸಮ್ಮತಿಸಿದ್ದರು.

**ಸಾಮಾಜಿಕ ಸೇವೆ ಆರಂಭ :**

ವಿದೇಶದಿಂದ ವಾಪಸ್ಸಾದ ಬಳಿಕ ಶ್ರೀನಿವಾಸ್ ಅವರು ಹರಿಹರ ನಗರದಲ್ಲಿ ಎಸ್.ಎಸ್. ಕನ್‌ಸ್ಟ್ರಕ್ಷನ್ಸ್ ಮತ್ತು ಡೆವಲಪರ್ಸ್ ಮೂಲಕ ರಿಯಲ್ ಎಸ್ಟೇಟ್ ಉದ್ಯಮಕ್ಕೆ ಕಾಲಿಟ್ಟರು. ಗಾರ್ಮೆಂಟ್ಸ್‌ನಲ್ಲಿ ಇದ್ದ ಅನುಭವದಿಂದಾಗಿ ಫ್ರೀಮಾರ್ಕ್ ಗಾರ್ಮೆಂಟ್ ಸ್ಥಾಪಿಸಿ, 20 ಜನರಿಗೆ ಉದ್ಯೋಗಾವಕಾಶ ಕಲ್ಪಿಸಿದರು. ತಮ್ಮ ತಂದೆ ಹನುಮಂತಪ್ಪನವರು ಅಧ್ಯಕ್ಷರಾಗಿ ನಡೆಸಿಕೊಂಡು ಬರುತ್ತಿದ್ದ ನೇತ್ರಾವತಿ ಕ್ರೆಡಿಟ್ ಕೋ-ಆಪ್ ಸೊಸೈಟಿಗೆ ತಂದೆಯ ನಿಧನದ ನಂತರ ಅಧ್ಯಕ್ಷರಾಗಿರುವ ಶ್ರೀನಿವಾಸ್ ಅವರು, ನಂದಿಗಾವಿ ಗ್ರಾಮದ ಶ್ರೀ ಬೀರಲಿಂಗೇಶ್ವರ ದೇವಸ್ಥಾನ ಸಮಿತಿಯ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ನಂತರ ಸಹೋದರ ಎನ್.ಹೆಚ್. ಸತ್ಯನಾರಾಯಣ ಅವರ ಸಹಕಾರದೊಂದಿಗೆ ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಆರಂಭಿಸಿದರು. 2018ರ ಫೆಬ್ರವರಿಯಲ್ಲಿ ಬೆಳ್ಳೂಡಿ ಶಾಖಾಮಠದಲ್ಲಿ ಹಮ್ಮಿಕೊಂಡಿದ್ದ ಕಾಗಿನೆಲೆ ಕನಕ ಗುರುಪೀಠದ ಬೆಳ್ಳಿ ಮಹೋತ್ಸವ ಹಾಗೂ ರಾಜ್ಯಮಟ್ಟದ ಕುರುಬ ಸಮಾಜದ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಸುಮಾರು 50 ಸಾವಿರಕ್ಕೂ ಹೆಚ್ಚು ಜನರಿಗೆ ಉಚಿತ ಮಜ್ಜಿಗೆ ವಿತರಣೆ ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಅದೇ ವರ್ಷ ಉತ್ತರ ಕರ್ನಾಟಕ ಭಾಗದಲ್ಲಿ ಸಂಭವಿಸಿದ ಅತಿವೃಷ್ಟಿ ವೇಳೆ ಬಾದಾಮಿ ತಾಲ್ಲೂಕಿನ ಜನರಿಗೆ ತನ್ನ ಸ್ನೇಹಿತರೊಂದಿಗೆ 2 ಲಾರಿ ಲೋಡ್ ಅಕ್ಕಿ, ರೊಟ್ಟಿ, ಬಟ್ಟೆ, ಹೊದಿಕೆ, ಮಕ್ಕಳಿಗೆ ಸ್ಕೂಲ್ ಬ್ಯಾಗ್, ಶೂ, ಪುಸ್ತಕ ಹಾಗೂ ಬ್ರೆಡ್ - ಬಿಸ್ಕತ್‌ಗಳನ್ನು ವಿತರಿಸಿ ಮಾನವೀಯತೆ ಮೆರೆದರು. ಪರಿಸರದ ಬಗ್ಗೆ ಕಾಳಜಿ ಹೊಂದಿರುವ ಶ್ರೀನಿವಾಸ್ ಅವರು, 2019ರ ಡಿಸೆಂಬರ್ 21ರಂದು ತಮ್ಮ ಹುಟ್ಟುಹಬ್ಬದ ಅಂಗವಾಗಿ ಹರಿಹರ ನಗರದಲ್ಲಿ ಸುಮಾರು ಒಂದು ಸಾವಿರ ಸಸಿಗಳನ್ನು ನೆಟ್ಟು ಪೋಷಣೆ ಮಾಡುತ್ತಾ ಬಂದಿರುವ ಇವರು, ಕಳೆದ ವರ್ಷ ವನಮಹೋತ್ಸವದ ವೇಳೆ 200 ಹೂ ಗಿಡಗಳನ್ನು ತಾಲ್ಲೂಕಿನ ವಿವಿಧ ದೇವಸ್ಥಾನ, ಶಾಲೆ ಹಾಗೂ ರುದ್ರಭೂಮಿಗಳಿಗೆ ನೀಡಿದ್ದಾರೆ.

2020ರ ಫೆಬ್ರವರಿಯಲ್ಲಿ ಹರಿಹರ ನಗರದಲ್ಲಿ ಉದ್ಯೋಗಕ್ಕಾಗಿ ಹೋರಾಟ ಎಂಬ ಬೃಹತ್ ಪ್ರತಿಭಟನೆ ಮೂಲಕ ಹನಗವಾಡಿ ಬಳಿ ಮಿಥೆನಾಲ್ ಕಾರ್ಖಾನೆ ಆರಂಭಕ್ಕೆ ಆಗ್ರಹಿಸಿ ಸರ್ಕಾರದ ಗಮನ ಸೆಳೆದಿದ್ದರು. 2020ರ ಮಾರ್ಚ್‌ನಲ್ಲಿ ಮಹಾಮಾರಿ ಕೊರೊನಾ ಭಾರತಕ್ಕೆ ಕಾಲಿಟ್ಟ ಸಂದರ್ಭದಲ್ಲಿ ಲಾಕ್‌ಡೌನ್ ಜಾರಿಯಾದ ದಿನದಿಂದಲೇ ಕೊರೊನಾ ವಿರುದ್ಧ ಹೋರಾಟ ಆರಂಭಿಸಿದ ನಂದಿಗಾವಿ ಶ್ರೀನಿವಾಸ್ ಅವರು, ಮೊದಲಿಗೆ ಕೊರೊನಾ ವಾರಿಯರ್ಸ್‌ಗಳಿಗೆ ಸ್ಯಾನಿಟೈಸರ್, ಮಾಸ್ಕ್ ನೀಡಿದರು. ನಂತರ ನಗರ ಮತ್ತು ಹಳ್ಳಿಗಳಲ್ಲಿ ಜನರಿಗೆ ಕರಪತ್ರಗಳನ್ನು ನೀಡಿ ಕೊರೊನಾ ಬಗ್ಗೆ ಜನಜಾಗೃತಿ ಮೂಡಿಸಿದರು.

ಕಳೆದ ವರ್ಷ ಮಾರ್ಚ್ ನಿಂದ ಜುಲೈವರೆಗೆ ಹರಿಹರ ತಾಲ್ಲೂಕಿನಲ್ಲಿ 18 ಸಾವಿರ ಮಾಸ್ಕ್ 3500 ಸ್ಯಾನಿಟೈಸರ್ ಬಾಟಲ್, 3500 ಆಯುಷ್ ಕಿಟ್ ಮತ್ತು 5 ಸಾವಿರ ಜನರಿಗೆ ಪುಡ್‌ಕಿಟ್‌ಗಳನ್ನು ವಿತರಣೆ ಮಾಡಿ, ದಾಖಲೆ ಬರೆದರು.

ಈ ವರ್ಷ ಕೊರೊನಾ ಎರಡನೇ ಅಲೆ ಪ್ರಾರಂಭವಾದಾಗಿನಿಂದ ಇದುವರೆಗೂ ಹರಿಹರ ತಾಲ್ಲೂಕಿನಲ್ಲಿ 32 ಸಾವಿರ ಮಾಸ್ಕ್, 3000 ಸ್ಯಾನಿಟೈಸರ್ ಬಾಟಲ್, 3000 ಸ್ಟೀಮರ್ (ಹಬೆ ಯಂತ್ರ) ಮತ್ತು ಆಟೋ ಚಾಲಕರು, ಅಲೆಮಾರಿಗಳು ಸೇರಿದಂತೆ ತಾಲ್ಲೂಕಿನ ಕಡು ಬಡವರಿಗೆ ಸುಮಾರು 3500 ಫುಡ್ ಕಿಟ್ ವಿತರಣೆ ಮಾಡಿರುವ ನಂದಿಗಾವಿ ಶ್ರೀನಿವಾಸ್ ಅವರು ಮಲೇಬೆನ್ನೂರಿನಲ್ಲಿ ರಂಜಾನ್ ಹಾಗೂ ಬಸವ ಜಯಂತಿ ಪ್ರಯುಕ್ತ ಬಡವರಿಗೆ ನಂದಿನಿ ಹಾಲು ವಿತರಣೆ ಮಾಡಿದ್ದಾರೆ.

**ಟ್ಯಾಂಕರ್ ಸಮರ್ಪಣೆ :**

ಕೊರೊನಾ ವಿರುದ್ಧದ ಹೋರಾಟದಲ್ಲಿ ಮೈಲಿಗಲ್ಲು ಸ್ಥಾಪಿಸಿರುವ ನಂದಿಗಾವಿ ಶ್ರೀನಿವಾಸ್ ಅವರು, ಸ್ಯಾನಿಟೈಸರ್ ಸಿಂಪರಣೆ ಮಾಡುವ ಟ್ಯಾಂಕರ್ ಅನ್ನು ಕಳೆದ ತಿಂಗಳ ಮೇ 9ರಂದು ಸಮರ್ಪಣೆ ಮಾಡಿದರು. ಹರಳಹಳ್ಳಿ ಗ್ರಾಮದಿಂದ ಪ್ರಾರಂಭವಾದ ಟ್ಯಾಂಕರ್ ಮೂಲಕ ಸ್ಯಾನಿಟೈಸೇಷನ್ ಮಾಡುವ ಕಾರ್ಯ ಇದುವರೆಗೂ 32 ಹಳ್ಳಿಗಳಲ್ಲಿ ನಡೆದಿದೆ. ಹರಿಹರ ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ನಂದಿಗಾವಿ ಶ್ರೀನಿವಾಸ್ ಅಭಿಮಾನಿ ಬಳಗದ ಮೂಲಕ 2020 ರಿಂದ ಇಲ್ಲಿಯವರೆಗೆ ಸುಮಾರು 28 ಯುವಕರ ತಂಡ ನಿರಂತರವಾಗಿ ನೊಂದ ಜನರಿಗೆ ಅಗತ್ಯ ಸೇವೆಯಲ್ಲಿ ತೊಡಗಿಕೊಂಡಿದ್ದಾರೆ. ಇದಲ್ಲದೇ ಹರಿಹರ ನಗರ ಸೇರಿದಂತೆ, ತಾಲ್ಲೂಕಿನ 14 ಹಳ್ಳಿಗಳಲ್ಲಿ ನಂದಿಗಾವಿ ಶ್ರೀನಿವಾಸ್ ಅಭಿಮಾನಿ ಬಳಗ ಸ್ಥಾಪಿಸಿಕೊಂಡಿರುವ ಯುವಕರು ಆ ಮೂಲಕ ಸಾಮಾಜಿಕ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿದ್ದಾರೆ.ಅಲ್ಲದೇ ಅಣ್ಣನ ಕೈತುತ್ತು ಎಂಬ ಹೆಸರಿನಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸುವ ಲಾರಿ ಚಾಲಕರಿಗೆ ಮತ್ತು ಕ್ಲೀನರ್‌ಗಳಿಗೆ ಅಭಿಮಾನಿ ಬಳಗದ ಯುವಕರು ಮಧ್ಯಾಹ್ನದ ಊಟದ ಪ್ಯಾಕೆಟ್‌ಗಳನ್ನು ಈಗಲೂ ವಿತರಿಸುವ ಮೂಲಕ ನೆರವಾಗಿದ್ದಾರೆ.

**ರಕ್ತದಾನ ಶಿಬಿರ :**

2021ರ ಫೆಬ್ರವರಿ 14ರಂದು ಪುಲ್ವಾಮ ದಾಳಿಯ ಕರಾಳ ದಿನದ ಅಂಗವಾಗಿ ನಂದಿಗಾವಿ ಶ್ರೀನಿವಾಸ್ ಅಭಿಮಾನಿ ಬಳಗದವರು ಹರಿಹರ ನಗರದಲ್ಲಿ ರಕ್ತದಾನ ಶಿಬಿರ ಏರ್ಪಡಿಸಿ, ದಾವಣಗೆರೆಯ ರಕ್ತನಿಧಿ ಕೇಂದ್ರಕ್ಕೆ 52 ಜನ ರಕ್ತದಾನ ಮಾಡಿದ್ದಾರೆ.

ಇಷ್ಟೆಲ್ಲಾ ಜನಪರ ಹಾಗೂ ಸಾಮಾಜಿಕ ಸೇವೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡು ಬಂದಿರುವ ನಂದಿಗಾವಿ ಶ್ರೀನಿವಾಸ್ ಅವರು, ನನ್ನ ಸೇವೆಯಲ್ಲಿ ಯಾವುದೇ ಸ್ವಾರ್ಥ ಮತ್ತು ಉದ್ದೇಶವಿಲ್ಲ. ನಾನು ನನ್ನ ದುಡಿಮೆಯ ಕಾಲು ಭಾಗದಷ್ಟು ಹಣವನ್ನು ಸಾಮಾಜಿಕ ಸೇವೆಗಾಗಿ ಬಳಸುವ ಮೂಲಕ ಜೀವನದಲ್ಲಿ ತೃಪ್ತಿ ಕಂಡುಕೊಂಡಿದ್ದೇನೆ. ನನ್ನ ಈ ಸಾಮಾಜಿಕ ಕೆಲಸಗಳಿಗೆ ನನ್ನ ತಾಯಿ ಕಮಲಮ್ಮ, ಪತ್ನಿ ಡಾ. ಶಿಲ್ಪ, ಸಹೋದರ ಎನ್.ಹೆಚ್. ಸತ್ಯನಾರಾಯಣ ಮತ್ತು ಅಭಿಮಾನಿ ಬಳಗದವರು ಬೆನ್ನೆಲುಬಾಗಿದ್ದಾರೆ. ಅವರಿಗೆ ನಾನು ಎಂದೆಂದಿಗೂ ಚಿರಋಣಿ ಎಂದಿದ್ದಾರೆ.

## ಸರ್ವಸ್ಪರ್ಶಿ ಕಾರ್ಯ : ಮೆಚ್ಚುಗೆ

ಮಹಾಮಾರಿ ಕೊರೊನಾ ವಿರುದ್ಧದ ಹೋರಾಟದಲ್ಲಿ ಫ್ರಂಟ್ ವಾರಿಯರ್ಸ್‌ಗಳಾದ ಹರಿಹರ ನಗರಸಭೆ, ಮಲೇಬೆನ್ನೂರು ಪುರಸಭೆ, ಪೌರ ಕಾರ್ಮಿಕರು, 3 ಪೊಲೀಸ್ ಠಾಣೆಗಳ ಸಿಬ್ಬಂದಿ, ಕಂದಾಯ ಇಲಾಖೆ, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತರಿಗೆ, ಆಟೋ ಚಾಲಕರು, ಗ್ರಾ.ಪಂ. ಸಿಬ್ಬಂದಿ, ಶಿಕ್ಷಕರು ಸೇರಿದಂತೆ ಸಾರ್ವಜನಿಕರಿಗೆ ಸಹಸ್ರಾರು ಸಂಖ್ಯೆಯಲ್ಲಿ ಮಾಸ್ಕ್, ಸ್ಯಾನಿಟೈಸರ್, ಫೇಸ್ ಶೀಲ್ಡ್, ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಆಯುಷ್ ಕಿಟ್, ಫುಡ್ ಕಿಟ್, ಸ್ಟೀಮರ್, ಬಾಡಿ ಟೆಂಪರೇಚರ್ ಚೆಕ್ಕಿಂಗ್ ಯಂತ್ರ ಸೇರಿದಂತೆ ಹತ್ತಾರು ಅಗತ್ಯ ವಸ್ತುಗಳನ್ನು ಕಳೆದ ವರ್ಷ ಮತ್ತು ಈ ವರ್ಷ ವಿತರಣೆ ಮಾಡಿರುವ ನಂದಿಗಾವಿ ಶ್ರೀನಿವಾಸ್ ಅವರು, ಕೊರೊನಾ ಹೇಗೆ ಎದುರಿಸಬೇಕೆಂಬ ಮಾಹಿತಿ ಇರುವ ಸಾವಿರಾರು ಕರಪತ್ರಗಳನ್ನು ಹಂಚಿದ್ದಾರೆ. ತಾಲ್ಲೂಕಿನ ಪ್ರತಿ ಗ್ರಾಮದಲ್ಲೂ ಸ್ವಂತ ಟ್ಯಾಂಕರ್ ಮೂಲಕ ಸ್ಯಾನಿಟೈಜರ್ ಸಿಂಪರಣೆ ಕಾರ್ಯ ಮಾಡಿಸುತ್ತಿದ್ದಾರೆ. ಹೀಗೆ ಹರಿಹರ ತಾಲ್ಲೂಕಿನ ಸರ್ವ ಜನರ ಸರ್ವತೋಮುಖ ಅಭಿವೃದ್ಧಿ ಬಗ್ಗೆ ವಿಶೇಷ ಕಾಳಜಿ ಹೊಂದಿರುವ ಶ್ರೀನಿವಾಸ್ ಅವರು, ಸಂಕಷ್ಟಕ್ಕೀಡಾದ ಜನರ ಬಗ್ಗೆ ಮಿಡಿಯುವ ಹೃದಯಹೊಂದಿದ್ದಾರೆ. ತಮ್ಮ ಕೈಲಾದ ಸೇವೆಯನ್ನು ಮಾಡುತ್ತಾ ತಾಲ್ಲೂಕಿನ ಜನತೆಯ ಮನಸ್ಸನ್ನು ಗೆದ್ದಿದ್ದಾರೆ.

ಸಂಕಷ್ಟಕ್ಕೆ ಮಿಡಿಯುವ ಮನಸ್ಸು ಹೊಂದಿರುವ ನಂದಿಗಾವಿ ಶ್ರೀನಿವಾಸ್ ಎಲ್ಲರಿಗೂ ಮಾದರಿಯಾಗಿದ್ದಾರೆ ಎಂದು ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ, ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಪಂಚಮಸಾಲಿ ಜಗದ್ಗುರು ಪೀಠದ ಶ್ರೀ ವಚನಾನಂದ ಸ್ವಾಮೀಜಿ, ಹೊಸಳ್ಳಿ ವೇಮನ ಗುರುಪೀಠದ ಶ್ರೀ ವೇಮನಾನಂದ ಸ್ವಾಮೀಜಿ, ನಂದಿಗುಡಿ ಬೃಹನ್ಮಠದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ, ಕೋಡಿಹಾಳ್ ಹೊಸಪೇಟೆ ಪುಣ್ಯಕೋಟಿ ಮಠದ ಸ್ವಾಮೀಜಿ ಮತ್ತು ಹರಿಹರದ ಚರ್ಚ್‌ನ ಫಾದರ್ ರೆವರೆಂಡ್ ಅಂಥೋನಿ ಪೀಟರ್, ಹರಿಹರದ ಮೌಲಾನಾ ಖಾಜಿ ಸೈಯದ್ ಶಂಷುದ್ದೀನ್ ಷಾ ಖಾದ್ರಿ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಉದ್ಯಮಿ ನಂದಿಗಾವಿ ಶ್ರೀನಿವಾಸ್ ಅವರು ಕೊರೊನಾ ಸಂಕಷ್ಟದ ಈ ಸಂದರ್ಭದಲ್ಲಿ ಕೊರೊನಾ ವಾರಿಯರ್ಸ್‌ಗಳಿಗೆ ಮತ್ತು ಸಂಕಷ್ಟದಲ್ಲಿರುವ ಜನರಿಗೆ ಅಗತ್ಯ ನೆರವು ನೀಡುವ ಮೂಲಕ ನಮ್ಮೊಂದಿಗೆ ಕೈ ಜೋಡಿಸಿದ್ದಾರೆಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್. ರಾಮಪ್ಪ, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ಹನುಮಂತರಾಯ, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಗ್ರಾಮಾಂತರ ಡಿವೈಎಸ್ಪಿ ನರಸಿಂಹ ತಾಮ್ರಧ್ವಜ, ಸಿಪಿಐ ಸತೀಶ್, ಟಿಹೆಚ್‌ಓ ಡಾ. ಚಂದ್ರಮೋಹನ್ ಅವರು ಅಭಿನಂದನೆ ಸಲ್ಲಿಸಿದ್ದಾರೆ.



ಹೊಳೆಸಿರಿಗೆರೆ ಪ್ರಾ. ಆರೋಗ್ಯ ಕೇಂದ್ರದಲ್ಲಿ ವೈದ್ಯರಿಗೆ, ಸಿಬ್ಬಂದಿಗಳಿಗೆ ಹಬೆಯಂತ್ರ ವಿತರಣೆ.



ಹರಿಹರ ನಗರಸಭೆ ಪೌರಕಾರ್ಮಿಕರಿಗೆ ಮಾಸ್ಕ್, ಫೇಸ್ ಶೀಲ್ಡ್, ಸ್ಟೀಮರ್ ವಿತರಣೆ.



ಮಲೇಬೆನ್ನೂರು ಪುರಸಭೆಯಲ್ಲಿ ಪೌರ ಕಾರ್ಮಿಕರಿಗೆ ಹಬೆಯಂತ್ರ ವಿತರಣೆ.



ಮಲೇಬೆನ್ನೂರು ಸಮುದಾಯ ಆರೋಗ್ಯ ಕೇಂದ್ರದಲ್ಲಿ ವಾರಿಯರ್ಸ್‌ಗಳಿಗೆ, ರೋಗಿಗಳಿಗೆ ಮಧ್ಯಾಹ್ನದ ಊಟ ವಿತರಣೆ




ಹನಗವಾಡಿ ಬಳಿ ಮಿಥೆನಾಲ್ ಕಾರ್ಖಾನೆ ಆರಂಭಕ್ಕೆ ಆಗ್ರಹಿಸಿ ಬೃಹತ್ ಪ್ರತಿಭಟನೆ



ಹರಿಹರದ 350 ಆಟೋ ಚಾಲಕರಿಗೆ ವಿವಿಧ ಧರ್ಮಗುರುಗಳ ಸಮ್ಮುಖದಲ್ಲಿ ಫುಡ್ ಕಿಟ್ ವಿತರಣೆ.



ನಂದಿಗಾವಿ ಶ್ರೀನಿವಾಸ್ ಹುಟ್ಟುಹಬ್ಬದ ಪ್ರಯುಕ್ತ ಹರಿಹರ ನಗರದಲ್ಲಿ ಸಾವಿರ ಸಸಿ ನೆಡುವ ಕಾರ್ಯಕ್ರಮ.




ಕಳೆದ ವರ್ಷ ಕೊರೊನಾ ವೇಳೆ ವಾರಿಯರ್ಸ್‌ಗಳಿಗೆ ಆಯುಷ್ ಕಿಟ್ ವಿತರಣೆ



ಹರಿಹರದಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಕ್ಯಾಲ್ಕ್ಯುಲೇಟರ್ ವಿತರಣೆ



ಪುಲ್ವಾಮ ದಾಳಿಯ ಕರಾಳ ದಿನದ ಅಂಗವಾಗಿ ರಕ್ತದಾನ ಶಿಬಿರ.




ಮಲೇಬೆನ್ನೂರು ಸಮುದಾಯ ಆರೋಗ್ಯ ಕೇಂದ್ರದ ಸೋಂಕಿತರ ಪರಿಚಾರಕರಿಗೆ ಮಧ್ಯಾಹ್ನದ ಊಟ ವಿತರಣೆ.



ಮಲೇಬೆನ್ನೂರಿನಲ್ಲಿ ರಂಜಾನ್ ಹಾಗೂ ಬಸವ ಜಯಂತಿ ಪ್ರಯುಕ್ತ ಹಾಲು ವಿತರಣೆ.



ಹರಿಹರದ ಗುತ್ತೂರು ಕಾಲೋನಿಯಲ್ಲಿ ವಾಸವಾಗಿರುವ ಅಲೆಮಾರಿ ಕುಟುಂಬಗಳಿಗೆ ಎನ್.ಹೆಚ್ ಶ್ರೀನಿವಾಸ್ ಸ್ನೇಹ ಬಳಗದ ವತಿಯಿಂದ ಫುಡ್ ಕಿಟ್ ವಿತರಣೆ



ಇಂದು ಎನ್.ಹೆಚ್ ಶ್ರೀನಿವಾಸ್ ಸ್ನೇಹ ಬಳಗದ ವತಿಯಿಂದ 8ನೇ ದಿನ ಪೊಲೀಸ್ ಸಿಬ್ಬಂದಿಯವರಿಗೆ ಹಾಗೂ ತಾಲ್ಲೂಕು ಆರೋಗ್ಯ ಇಲಾಖೆಯ ಸಿಬ್ಬಂದಿಗಳಿಗೆ ಬೆಳಗಿನ ಉಪಹಾರ ಹಾಗೂ ಮಧ್ಯಾಹ್ನದ ಭೋಜನ ಕೂಟವನ್ನು ಏರ್ಪಡಿಸಲಾಗಿತ್ತು.

advt

# ಕೊರೊನಾ : ವೇತನಕ್ಕೆ ಹಣವಿಲ್ಲದೇ ಹಯಾತ್ ರೆಜೆನ್ಸಿ ಹೋಟೆಲ್ ಬಂದ್



ಮುಂಬೈ, ಜೂ. 8 - ಮುಂಬೈನ ಹೆಸರಾಂತ ಪಂಚತಾರಾ ಹೋಟೆಲ್‌ಗಳಲ್ಲಿ ಒಂದಾದ ಹಯಾತ್ ರೆಜೆನ್ಸಿ ತನ್ನ ನೌಕರರಿಗೆ ವೇತನ ನೀಡಲು ಹಣವಿಲ್ಲದೇ ಮುಚ್ಚಿದೆ. ಮುಂಬೈ ವಿಮಾನ ನಿಲ್ದಾಣಕ್ಕೆ ಹತ್ತಿರದಲ್ಲಿರುವ ಈ ಹೋಟೆಲ್, ಏಷಿಯನ್ ಹೋಟೆಲ್ಸ್ (ವೆಸ್ಟ್) ಲಿಮಿಟೆಡ್ ಮಾಲೀಕತ್ವದ್ದಾಗಿದೆ.

ಹೋಟೆಲ್ ವ್ಯವಸ್ಥಾಪಕ ನಿರ್ದೇಶಕ ಹರ್‌ದೀಪ್ ಮಾರ್ವಾ ಅವರು ಸಂಕ್ಷಿಪ್ತ ಹೇಳಿಕೆ ನೀಡಿದ್ದು, ಹೋಟೆಲ್ ಕಾರ್ಯಾಚರಣೆಗಾಗಿ ಮಾತೃಸಂಸ್ಥೆ ಹಣ ಕಳಿಸಿಲ್ಲ ಎಂದಿದ್ದಾರೆ.

ಏಷಿಯನ್ ಹೋಟೆಲ್ಸ್ (ವೆಸ್ಟ್) ಮೂಲಕ ಯಾವುದೇ ಹಣ ಬಂದಿಲ್ಲ, ಹೀಗಾಗಿ ವೇತನ ಪಾವತಿಸಲು ಇಲ್ಲವೇ ಹೋಟೆಲ್ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಎಂದವರು ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ತಕ್ಷಣದಿಂದಲೇ ಜಾರಿಗೆ ಬರುವಂತೆ ಎಲ್ಲಾ ಕಾರ್ಯಾಚರಣೆಗಳನ್ನು ನಿಲ್ಲಿಸಲಾಗಿದೆ. ಮುಂದಿನ ನೋಟಿಸ್‌ವರೆಗೆ ಹೋಟೆಲ್ ಮುಚ್ಚಿರಲಿದೆ ಎಂದು ತಿಳಿಸಲಾಗಿದೆ.

ಕೊರೊನಾ ಕಾರಣದಿಂದಾಗಿ ಹೋಟೆಲ್ ಉದ್ಯಮಕ್ಕೆ ತೀವ್ರ ಹೊಡೆತ ಬಿದ್ದಿದೆ. ಪ್ರಯಾಣ ಅತ್ಯಂತ ಕನಿಷ್ಠ ಪ್ರಮಾಣದಲ್ಲಿದೆ, ಪ್ರವಾಸೋದ್ಯಮ ಕುಸಿದಿದೆ ಹಾಗೂ ಉದ್ಯಮಗಳು ಬಂದ್ ಆಗಿವೆ. ಎರಡನೇ ಕೊರೊನಾ ಅಲೆ ಇನ್ನಷ್ಟು ಸಂಕಷ್ಟ ತಂದಿದೆ.

# ಪರಿಸರ ವ್ಯವಸ್ಥೆ ಮರುಸ್ಥಾಪನೆ ಈ ವರ್ಷದ ಘೋಷ ವಾಕ್ಯ

ದಾವಣಗೆರೆ, ಜೂ.8- ವಿಶ್ವಸಂಸ್ಥೆಯು 2021 ರಿಂದ 2030 ರ ಅವಧಿಯನ್ನು ವಿಶ್ವ ಪರಿಸರ ವ್ಯವಸ್ಥೆ ಮರುಸ್ಥಾಪನೆ ದಶಕ ಎಂದು ಘೋಷಿಸಿದ್ದು, ಈ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕಿದೆ ಎಂದು ಹಿರಿಯ ನ್ಯಾಯವಾದಿ ಎಲ್.ಎಚ್. ಅರುಣ್‌ಕುಮಾರ್ ಸಲಹೆ ನೀಡಿದರು.

ಆವರಗೆರೆ ಗ್ರಾಮದ ಶ್ರೀ ಕಾಯಕ ಯೋಗಿ ಬಸವ ಪರಿಸರ ವೇದಿಕೆ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಇವರ ಜಂಟಿ ಆಶ್ರಯದಲ್ಲಿ ನಿನ್ನೆ ಏರ್ಪಾಡಾಗಿದ್ದ ವಿಶ್ವ ಪರಿಸರ ದಿನಾಚರಣೆ 2021 - ಕೋವಿಡ್ 19 ಜಾಗೃತಿ ಜಾಥಾವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಶ್ವಸಂಸ್ಥೆ ಕರೆಯ ಮೇರೆಗೆ ಜಗತ್ತಿನಾದ್ಯಂತ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಗುತ್ತಿದೆ. 'ಪರಿಸರ ವ್ಯವಸ್ಥೆ ಮರುಸ್ಥಾಪನೆ' ಈ ವರ್ಷದ ಘೋಷ ವಾಕ್ಯವಾಗಿದೆ. ದಿನಾಚರಣೆಯ ಮೂಲ ಉದ್ದೇಶ, ಒಟ್ಟಾರೆ ನೈಸರ್ಗಿಕ ಪರಿಸರವನ್ನು ಅದರ ಮೂಲ ಸ್ಥಿತಿಗೆ ಕೊಂಡೊಯ್ಯುವುದು, ಮರುಸ್ಥಾಪಿಸುವುದು. ಕರ್ನಾಟಕದ ಪಶ್ಚಿಮ ಘಟ್ಟಗಳಿಂದ ಹಿಡಿದು ಬ್ರೆಜಿಲ್‌ನ ಅಮೆಜಾನ್‌ನಂತಹ ಜೀವ ವೈವಿಧ್ಯದ ಆಧಾರಗಳು ಇಂದು ನಾಶವಾಗುತ್ತಿವೆ. ಜಗತ್ತಿನ 160 ಕೋಟಿ ಜನರ ಜೀವನ ಅರಣ್ಯಗಳ ಮೇಲೆ ಅವಲಂಬಿತವಾಗಿದೆ. ಪರಿಸರದ ಅಮೂಲ್ಯ ಸಂಪನ್ಮೂಲ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಜೀವ ಜಗತ್ತು ಮತ್ತು ಮನುಷ್ಯ ಬದುಕಿ ಬಾಳಲು ನೈಸರ್ಗಿಕ ಸಂಪನ್ಮೂಲ ಮೂಲಾಧಾರವಾಗಿದೆ. ನಿಸರ್ಗ ನೀಡುವ ಗಾಳಿ, ನೀರು, ಅನ್ನ ಬಿಟ್ಟು ಬದುಕಲು ಸಾಧ್ಯವಿಲ್ಲ ಎಂದು ಅವರು ಪ್ರತಿಪಾದಿಸಿದರು.



ಆವರಗೆರೆಯ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಹಿರಿಯ ವಕೀಲ ಎಲ್.ಎಚ್. ಅರುಣ್‌ಕುಮಾರ್

ಪರಿಸರ ಸಂರಕ್ಷಣೆ ವೇದಿಕೆ ಅಧ್ಯಕ್ಷ ಗಿರೀಶ್ ದೇವರಮನೆ ಮಾತನಾಡಿ, ಪರಿಸರ ದಿನಾಚರಣೆ ಅರ್ಥಪೂರ್ಣ ಆಚರಣೆಯಾಗಿದ್ದು, ನದಿ ಮೂಲಗಳನ್ನು, ಅರಣ್ಯಗಳನ್ನು ಹಾಗೂ ಜಲಚರಗಳನ್ನು ಸಂರಕ್ಷಿಸುವ ಹೊಣೆಗಾರಿಕೆ ನಮ್ಮದಾಗಿದೆ. ಪ್ಲಾಸ್ಟಿಕ್ ಬಳಕೆಯಂತಹ ಅಪಾಯಕಾರಿ ವಸ್ತುಗಳ ಬಳಕೆ ನಿಲ್ಲಿಸಬೇಕು. ಮರ, ಗಿಡ ನೆಡುವುದರ ಮೂಲಕ ಅವುಗಳನ್ನು ಸಂರಕ್ಷಿಸಿ, ಪರಿಸರ ಸಮತೋಲನ ಕಾಪಾಡಬೇಕು ಎಂದರು.

ಪಾಲಿಕೆ ಮಾಜಿ ಸದಸ್ಯ ಹೆಚ್.ಜಿ. ಉಮೇಶ್ ಮಾತನಾಡಿ, ಪರಿಸರ ಸಂರಕ್ಷಣೆಯ ಕಾರ್ಯದಲ್ಲಿ ಬಸವ ಪರಿಸರ ವೇದಿಕೆ ಹಮ್ಮಿಕೊಂಡ ಕಾರ್ಯಗಳನ್ನು ವಿವರಿಸಿದರು.

ಶ್ರೀ ಕಾಯಕ ಯೋಗಿ ಬಸವ ಪರಿಸರ ವೇದಿಕೆ ನಾಯಕನಹಟ್ಟಿ ರುದ್ರಪ್ಪ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಗುರುಸಿದ್ದಸ್ವಾಮಿ, ಪರಿಸರ ವೇದಿಕೆ ಕಾರ್ಯದರ್ಶಿ ಬಾನಪ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಕೋವಿಡ್ ಆಸ್ಪತ್ರೆಗೆ ಮಾಜಿ ಶಾಸಕ ಶಾಂತನಗೌಡ ಭೇಟಿ



ಹೊನ್ನಾಳಿ

ಹೊನ್ನಾಳಿ, ಜೂ.8- ಕೊರೊನಾ ಸೋಂಕಿಗೆ ಚಿಕಿತ್ಸೆ ಪಡೆದುಕೊಳ್ಳುವುದರ ಜೊತೆಗೆ ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು ಎಂದು ಮಾಜಿ ಶಾಸಕ ಡಿ.ಜಿ. ಶಾಂತನಗೌಡ ಹೇಳಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿನ ಕೋವಿಡ್ ಸೋಂಕಿತರು ಚಿಕಿತ್ಸೆ ಪಡೆಯುತ್ತಿರುವ ವಾರ್ಡ್‌ಗೆ ಶನಿವಾರ ಪಿಪಿಇ ಕಿಟ್ ಧರಿಸಿ, ಭೇಟಿ ನೀಡಿ ಆರೋಗ್ಯ ವಿಚಾರಿಸಿ, ಹಣ್ಣು-ಬ್ರೆಡ್ ವಿತರಿಸಿದ ಬಳಿಕ ಅವರು ಮಾತನಾಡಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ. ಮಂಜಪ್ಪ ಮಾತನಾಡಿ, ಕೊರೊನಾ ರೋಗ ನಿರ್ಮೂಲನೆಗೆ ಸದ್ಯಕ್ಕೆ ನಿರ್ದಿಷ್ಟ ಔಷಧಿ ಇಲ್ಲ. ಆದರೆ ನಾವು ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ ರೋಗದಿಂದ ಬಚಾವಾಗಬಹುದು. ಎಲ್ಲರೂ ತಪ್ಪದೇ ಲಸಿಕೆ ಪಡೆದುಕೊಳ್ಳಬೇಕು ಎಂದರು.

ಜಿಲ್ಲಾ ಹಾಪ್‌ಕಾಮ್ಸ್ ನಿರ್ದೇಶಕ ಅರಕೆರೆ ಎಸ್.ಜಿ. ಮಧುಗೌಡ, ತಾಲ್ಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಪ್ರಶಾಂತ್ ಬಣ್ಣಜ್ಜಿ, ಸಾಮಾಜಿಕ ಜಾಲತಾಣದ ತಾಲ್ಲೂಕು ಅಧ್ಯಕ್ಷ ತರಗನಹಳ್ಳಿ ಶಿವರಾಜ್, ಯುವ ಕಾಂಗ್ರೆಸ್ ಮುಖಂಡರಾದ ಗಣೇಶ್ ಮದಕರಿ, ಹರೀಶ್ ಕೋಟೆಮಲ್ಲೂರು, ಎ.ಜಿ. ಹರೀಶ್ ಮತ್ತಿತರರು ಹಾಜರಿದ್ದರು.

## ಉದಾಸಿಗೆ ಕೋಳಿವಾಡ ಸಂತಾಪ



ರಾಣೇಬೆನ್ನೂರು, ಜೂ.8- ಹಾನಗಲ್ ಶಾಸಕ ಸಿ.ಎಂ. ಉದಾಸಿ ಅವರ ನಿಧನದಿಂದ ಹಾವೇರಿ ಜಿಲ್ಲೆಗೆ ಹಾಗೂ ರಾಜ್ಯ ರಾಜಕಾರಣಕ್ಕೆ ತುಂಬಲಾರದ ನಷ್ಟ ಉಂಟಾಗಿದೆ ಎಂದು ಹೇಳಿರುವ ಮಾಜಿ ಸ್ಪೀಕರ್ ಕೆ.ಬಿ. ಕೋಳಿವಾಡ ಸಂತಾಪ ವ್ಯಕ್ತಪಡಿಸಿದ್ದಾರೆ.

ಉದಾಸಿ ಅವರು ಸಚಿವರಾಗಿ ತಮ್ಮ ಖಾತೆಯನ್ನು ಬಹಳ ಅಚ್ಚುಕಟ್ಟಾಗಿ ನಿಭಾಯಿಸಿದವರು. ಅವರು ಸರಳ, ಸಜ್ಜನಿಕೆಯ ರಾಜಕಾರಣಿ ಆಗಿದ್ದರು ಎಂದು ಕೋಳಿವಾಡ ಅವರು ಸ್ಮರಿಸಿದರು.

ನಗರಸಭೆ ಅಧ್ಯಕ್ಷೆ ರೂಪಾ ಚಿನ್ನಿಕಟ್ಟಿ, ವಾಯವ್ಯ ಸಾರಿಗೆ ಸಂಸ್ಥೆ ಉಪಾಧ್ಯಕ್ಷ ಡಾ. ಬಸವರಾಜ ಕೇಲಗಾರ, ವಾಣಿಜ್ಯೋದ್ಯಮ ಸಂಸ್ಥೆ ಉಪಾಧ್ಯಕ್ಷ ಜಿ.ಜಿ. ಹೊಟ್ಟಿಗೌಡ್ರ, ಕೆಪಿಸಿಸಿ ಕಾರ್ಯದರ್ಶಿ ಪ್ರಕಾಶ ಕೋಳಿವಾಡ, ಗಂಗಾ ಬ್ಯಾಂಕ್ ಅಧ್ಯಕ್ಷ ರತ್ನಾಕರ ಕುಂದಾಪುರ, ಚನ್ನೇಶ ಬ್ಯಾಂಕ್ ಅಧ್ಯಕ್ಷ ಕೆ. ಶಿವಲಿಂಗಪ್ಪ, ವಾಸವಿ ಬ್ಯಾಂಕ್ ಅಧ್ಯಕ್ಷ ಕೆ.ವಿ. ಶ್ರೀನಿವಾಸ, ಬಿಜೆಪಿ ಮುಖಂಡ ವಿಶ್ವನಾಥ ಪಾಟೀಲ, ಎ.ಬಿ. ಪಾಟೀಲ, ಜೈನ್ ಶ್ವೇತಾಂಬರ ಸಂಘದ ಅಧ್ಯಕ್ಷ ಪ್ರಕಾಶ್ ಜೈನ್, ಸಾಧು ಲಿಂಗಾಯತ ಸಮಾಜದ ಅಧ್ಯಕ್ಷ ಎಂ.ಎಸ್. ಅರಕೇರಿ ಇನ್ನಿತರರು ಸಂತಾಪ ವ್ಯಕ್ತಪಡಿಸಿದ್ದಾರೆ.

## ಗುಂಪಾಗುವುದು ಬೇಡ

(1ನೇ ಪುಟದಿಂದ) ಇಳಿಕೆಯಾಗಿದೆ. ಮಂಗಳವಾರ 86,498 ಸೋಂಕು ಪ್ರಕರಣಗಳು ಹಾಗೂ 2,123 ಸಾವುಗಳು ವರದಿಯಾಗಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಮೇ 7ರಂದು ದೇಶದಲ್ಲಿ 4.14 ಲಕ್ಷ ಸೋಂಕಿತರು ಕಂಡು ಬಂದಿದ್ದರು.

ಜನಸಮೂಹಕ್ಕೆ ಲಸಿಕೆ ನೀಡುವವರೆಗೂ ಕೊರೊನಾ ನಿಯಮಗಳನ್ನು ಪಾಲಿಸಬೇಕು ಎಂದು ಹೇಳಿರುವ ಕೇಂದ್ರ ಸರ್ಕಾರ, ರಾಜ್ಯಗಳು ಕೊರೊನಾ ಲಾಕ್‌ಡೌನ್ ಸಡಿಲಿಸಿದರೂ ಕೆಲ ತಿಂಗಳ ಕಾಲ ದೊಡ್ಡ ಸಂಖ್ಯೆಯಲ್ಲಿ ಜನ ಸೇರುವುದನ್ನು ತಪ್ಪಿಸಬೇಕು ಎಂದು ಹೇಳಿದೆ.

## ಉದಾಸಿ ನಿಧನಕ್ಕೆ ಸಂಸದರ ಸಂತಾಪ

ದಾವಣಗೆರೆ, ಜೂ.8- ಮಾಜಿ ಸಚಿವ ಸಿ.ಎಂ. ಉದಾಸಿ ಅವರ ನಿಧನಕ್ಕೆ ಸಂಸದ ಜಿ.ಎಂ. ಸಿದ್ದೇಶ್ವರ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಉದಾಸಿಯವರ ಅಗಲಿಕೆಯಿಂದ ಸಾತ್ವಿಕ ರಾಜಕಾರಣ, ಲೋಕಕ್ಕಾದ ನಷ್ಟ ಎಂದು ಸಂತಾಪದಲ್ಲಿ ತಿಳಿಸಿದ್ದಾರೆ. ಹಾನಗಲ್ ಕ್ಷೇತ್ರದ ಶಾಸಕರಾಗಿ, ವಿವಿಧ ಇಲಾಖೆಗಳ ಸಚಿವರಾಗಿ ಯಶಸ್ವಿಯಾಗಿ ನಿಭಾಯಿಸಿ ದ್ದರು. ಮುತ್ಸದ್ಧಿ ರಾಜಕಾರಣಿ ನಮ್ಮನ್ನಗಲಿರುವುದು ನೋವಿನ ಸಂಗತಿ ಎಂದಿದ್ದಾರೆ.

## ಔಷಧ ಮಾರಾಟ ಪ್ರತಿನಿಧಿಗಳಿಗೆ ಲಸಿಕೆ



ನಗರದಲ್ಲಿ ಇಂದು

ಕರ್ನಾಟಕ ರಾಜ್ಯ ಔಷಧ ಮತ್ತು ಮಾರಾಟ ಪ್ರತಿನಿಧಿಗಳ ಸಂಘದ ಸ್ಥಳೀಯ ಘಟಕವು ಜಿಲ್ಲಾಡಳಿತದ ಸಹಯೋಗದೊಂದಿಗೆ ಔಷಧ ಮತ್ತು ಮಾರಾಟ ಪ್ರತಿನಿಧಿಗಳಿಗೆ ಕೋವಿಡ್ ಲಸಿಕಾ ಕಾರ್ಯಕ್ರಮವನ್ನು ರೋಟರಿ ಬಾಲ ಭವನದಲ್ಲಿ ಇಂದು ಬೆಳಿಗ್ಗೆ 9 ರಿಂದ ಸಂಜೆ 4 ರವರೆಗೆ ಹಮ್ಮಿಕೊಂಡಿದೆ ಎಂದು ಘಟಕದ ಜಿಲ್ಲಾಧ್ಯಕ್ಷ ಗಿರೀಶ್ ಸಿದ್ದಯ್ಯ ತಿಳಿಸಿದ್ದಾರೆ.

## ಯೋಗೀಶ್ವರ್ ವರ್ತನೆ,ಯತ್ನಾಳ್ ಹೇಳಿಕೆಗೆ ಬೇಸರ: ಶಿಸ್ತು ಕ್ರಮಕ್ಕೆ ಆಗ್ರಹ



ಹರಪನಹಳ್ಳಿ, ಜೂ.8- ಮುಖ್ಯಮಂತ್ರಿ ಯಡಿಯೂರಪ್ಪನವರು ಇಳಿ ವಯಸ್ಸಿನಲ್ಲಿ ಕೂಡ ಕೊರೊನಾ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದು, ರಾಜ್ಯದ ಅಭಿವೃದ್ಧಿ ವಿಚಾರದಲ್ಲಿ ಮೊದಲ ಮುಖ್ಯಮಂತ್ರಿಯಾಗಿ ಆಡಳಿತಾವಧಿ ಯಶಸ್ವಿಯಾಗಿ ಪೂರ್ಣಗೊಳಿಸುತ್ತಾರೆ ಎಂದು ಜಿಲ್ಲಾ ಬಿ ಜೆಪಿ ರೈತ ಮೋರ್ಚಾ ಮಾಜಿ ಉಪಾಧ್ಯಕ್ಷ ಬಾಗಳಿ ಕೊಟ್ರೇಶಪ್ಪ ತಿಳಿಸಿದ್ದಾರೆ. ಪಕ್ಷದಲ್ಲಿದ್ದುಕೊಂಡು ಸಚಿವ ಸಿ.ಪಿ. ಯೋಗೀಶ್ವರ್, ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಅವರ ಹೇಳಿಕೆಗಳು ತಳಮಟ್ಟದ ಕಾರ್ಯಕರ್ತರಾಗಿ ಕೆಲಸ ಮಾಡುತ್ತಿರುವ ನಮ್ಮಂತಹ ಕಾರ್ಯಕರ್ತರಿಗೆ ನೋವು ತಂದಿದೆ ಎಂದಿದ್ದಾರೆ.

# ವಾರಿಯರ್ಸ್‌ಗೆ 'ವಿಶೇಷ ಪ್ಯಾಕೇಜ್' ಘೋಷಿಸಲು ಆಗ್ರಹ

ದಾವಣಗೆರೆ, ಜೂ.8- ತಮ್ಮ ಜೀವದ ಹಂಗು ತೊರೆದು ಕೊರೊನಾ ಸೋಂಕಿತರ ಆರೈಕೆಯಲ್ಲಿ ತೊಡಗಿರುವ ವೈದ್ಯರು, ನರ್ಸ್‌ಗಳು ಸೇರಿದಂತೆ ಎಲ್ಲಾ ಹಂತದ ಕೊರೊನಾ ವಾರಿಯರ್ಸ್‌ಗೆ 'ವಿಶೇಷ ಪ್ಯಾಕೇಜ್' ಘೋಷಣೆ ಮಾಡುವಂತೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ವಕ್ತಾರ ಹೆಚ್.ಜೆ. ಮೈನುದ್ದೀನ್ ಆಗ್ರಹಿಸಿದರು.

ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲಸಿಕೆ ಉತ್ಪಾದನೆಗಾಗಿ ಕೇಂದ್ರ ಬಜೆಟ್‌ನಲ್ಲಿ 35 ಸಾವಿರ ಕೋಟಿ ರೂ. ಮೀಸಲಿಡಲಾಗಿತ್ತು. ಆ ಹಣ ಎಲ್ಲಿ ಹೋಯಿತು ? ಎಂಬುದೇ ಗೊತ್ತಾಗುತ್ತಿಲ್ಲ. ಪಿಎಂ ಕೇರ್ ಫೌಂಡೇಷನ್‌ನಲ್ಲಿ ಎಷ್ಟು ಹಣ ಜಮೆ ಆಗಿದೆ. ಎಷ್ಟು ಸದ್ಬಳಕೆ ಆಗಿದೆ ಎಂಬುದರ ಬಗ್ಗೆ ಪ್ರಧಾನಿ ಲೆಕ್ಕ ಕೊಡಲಿ ಎಂದು ಒತ್ತಾಯಿಸಿದರು. ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ಎಲ್.ಹೆಚ್. ಸಾಗರ್, ಪ್ರಧಾನ ಕಾರ್ಯದರ್ಶಿ ಮೊಹಮದ್ ಸಾಧಿಕ್ ಸದ್ದಾಂ, ಮಹಮ್ಮದ್ ವಾಜೀದ್, ಸೈಯದ್ ಇರ್ಫಾನ್, ಮೊಹಮ್ಮದ್ ಆರೀಫ್, ಫಾರೂಕ್ ಶೇಖ್ ಉಪಸ್ಥಿತರಿದ್ದರು.

### ಪ್ರಧಾನಿಯವರ ಉದ್ಯೋಗ ಸೃಷ್ಟಿ ಭರವಸೆ ಹುಸಿ

ಚುನಾವಣಾ ಸಂದರ್ಭದಲ್ಲಿ ಯುವ ಜನರಿಗೆ ನೀಡಿದ ಉದ್ಯೋಗ ಸೃಷ್ಟಿ ಭರವಸೆ ಹುಸಿಯಾಗಿದೆ. 12 ಕೋಟಿ 20 ಲಕ್ಷ ಜನ ಉದ್ಯೋಗ ಕಳೆದುಕೊಂಡಿದ್ದಾರೆ ಎಂದು ಮೈನುದ್ದೀನ್ ಹೇಳಿದರು. ಕಳೆದ ಏಳು ವರ್ಷಗಳಲ್ಲಿ ನಿರುದ್ಯೋಗ ಪ್ರಮಾಣ ಶೇ. 11.3 ರಷ್ಟು ಏರಿಕೆಯಾಗಿದೆ. ಕಳೆದ ಏಪ್ರಿಲ್‌ನಲ್ಲಿ 75 ಲಕ್ಷ ಜನ ಉದ್ಯೋಗ ಕಳೆದುಕೊಂಡಿದ್ದಾರೆ ಎಂದರು.

## ಹರಿಹರ ತಾಲ್ಲೂಕಿನಲ್ಲಿ 588 ಜನರಿಗೆ ಟೆಸ್ಟ್

ಮಲೇಬೆನ್ನೂರು, ಜೂ.8- ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇಂದು ಮಂಗಳವಾರ 45 ಜನರಿಗೆ ಕೊರೊನಾ ಟೆಸ್ಟ್ ಮಾಡಿದ್ದು, 5 ಜನರಿಗೆ ಪಾಸಿಟಿವ್ ಬಂದಿದೆ.

ಮಲೇಬೆನ್ನೂರು, ಕೊಮಾರನಹಳ್ಳಿ, ಹಾಲಿವಾಣ ಸೇರಿ 115 ಜನರಿಗೆ ಕೋವಿಡ್ ಲಸಿಕೆ ಹಾಕಲಾಗಿದೆ ಎಂದು ವೈದ್ಯಾಧಿಕಾರಿ ಡಾ. ಲಕ್ಷ್ಮಿದೇವಿ ತಿಳಿಸಿದ್ದಾರೆ.

**588 ಟೆಸ್ಟ್:** ಹರಿಹರ ತಾಲ್ಲೂಕಿನಲ್ಲಿ ಗುರುವಾರ 588 ಜನರಿಗೆ ಕೋವಿಡ್ ಪರೀಕ್ಷೆ ಮಾಡಿದ್ದು, 119 ರ್‍ಯಾಪಿಡ್ ಟೆಸ್ಟ್‌ನಲ್ಲಿ 22 ಜನರಿಗೆ ಸೋಂಕು ದೃಢ ಪಟ್ಟಿದೆ.

ನಂದಿತಾವರೆಯಲ್ಲಿ 117, ಹನಗವಾಡಿಯಲ್ಲಿ 102, ಕೆ.ಎನ್. ಹಳ್ಳಿಯಲ್ಲಿ 25, ಭಾನುವಳ್ಳಿಯಲ್ಲಿ 69 ಜನರು ಟೆಸ್ಟ್‌ಗೆ ಒಳಗಾಗಿದ್ದಾರೆ ಎಂದು ತಾಲ್ಲೂಕು ಹಿರಿಯ ಆರೋಗ್ಯ ಸಹಾಯಕ ಎಂ. ಉಮ್ಮಣ್ಣ ತಿಳಿಸಿದ್ದಾರೆ.

ಮಂಗಳವಾರ ಬೆಳಗಿನ ವರದಿ ಪ್ರಕಾರ ಹರಿಹರ ತಾಲ್ಲೂಕಿನಲ್ಲಿ 74 ಜನರಿಗೆ ಕೋವಿಡ್ ಪರೀಕ್ಷೆ ವರದಿ ಪಾಸಿಟಿವ್ ಬಂದಿದೆ.

## ಹೆಚ್ಚಿದ ಉಪಟಳ : ಹಂದಿ, ನಾಯಿಗಳ ನಿರ್ಮೂಲನೆಗೆ ಕ್ರಮ ಕೈಗೊಳ್ಳಲು ಒತ್ತಾಯ

ದಾವಣಗೆರೆ, ಜೂ.8- ನಗರದ ಹಳೇ ಭಾಗದಲ್ಲಿ ಹಂದಿ, ನಾಯಿಗಳ ಉಪಟಳ ದಿನೇ ದಿನೇ ಹೆಚ್ಚಾಗುತ್ತಿದೆ. ಕೂಡಲೇ ನಿರ್ಮೂಲನೆಗೆ ಮಹಾನಗರ ಪಾಲಿಕೆ ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ಸೋಷಿಯಲ್ ಸರ್ವೀಸ್, ಇಂಡಿಯನ್ ಹೆಲ್ಪಿಂಗ್ ಹ್ಯಾಂಡ್ ಸಂಘಟನೆ ಹಾಗೂ ದಾವಣಗೆರೆ ಎಕ್ಸ್‌ಪ್ರೆಸ್ ನ್ಯೂಸ್ ನಿರೂಪಕರು ಒತ್ತಾಯಿಸಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ಸೋಷಿಯಲ್ ಸರ್ವೀಸ್ ಸಂಘಟನೆಯ ಅಧ್ಯಕ್ಷ ಮೊಹ್ಮದ್ ಹಯಾತ್ ಅವರು, ಮಹಾನಗರ ಪಾಲಿಕೆಯ ದಿವ್ಯ ನಿರ್ಲಕ್ಷ್ಯವೇ ಹಂದಿ, ನಾಯಿಗಳ ಕಾಟಕ್ಕೆ ಕಾರಣ ಎಂದರು.

ಮೊನ್ನೆ ಪಾಲಿಕೆ ವ್ಯಾಪ್ತಿಯ 12ನೇ ವಾರ್ಡ್‌ನಲ್ಲಿ ಐದು ವರ್ಷದ ಬಾಲಕಿ ಮೇಲೆ ನಾಯಿಗಳು ನಡೆಸಿದ ದಾಳಿಯಿಂದಾಗಿ, ಆಕೆ ಬಾಪೂಜಿ ಆಸ್ಪತ್ರೆಗೆ ದಾಖಲಾಗಿ ಜೀವನ್ಮರಣದ ಹೋರಾಟ ನಡೆಸುತ್ತಿದ್ದಾಳೆ. ಇಂತಹ ಘಟನೆ ನಡೆಯದಂತೆ ಶಾಶ್ವತ ಪರಿಹಾರ ಕಲ್ಪಿಸುವ ಅಗತ್ಯವಿದೆ. ಹಂದಿ ಮತ್ತು ನಾಯಿಗಳ ನಿರ್ಮೂಲನೆ ಜೊತೆಗೆ ಸ್ವಚ್ಛತೆಗೆ ಹೆಚ್ಚು ಗಮನ ಹರಿಸುವಂತೆ ಅವರು ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಮೊಹ್ಮದ್ ಅಮೀನ್, ಅಹಮದ್ ಬಾಷಾ, ಖಲೀಲ್, ಖಾಸಿಂ ಉಪಸ್ಥಿತರಿದ್ದರು.

## ಲಸಿಕೆ, ಆಹಾರಕ್ಕಾಗಿ 1.45 ಲಕ್ಷ ಕೋಟಿ ರೂ. ವೆಚ್ಚ

(1ನೇ ಪುಟದಿಂದ) ನೀಡಲಾಗಿತ್ತು.

ಇದೇ ವೇಳೆ, ನವೆಂಬರ್‌ವರೆಗೆ 80 ಕೋಟಿ ಜನರಿಗೆ ತಲಾ ಐದು ಕೆಜಿ ಧಾನ್ಯ ಹಾಗೂ ಒಂದು ಕೆಜಿ ಬೇಳೆ ಪ್ರತಿ ತಿಂಗಳು ನೀಡುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. ಇದಕ್ಕೆ ಸರ್ಕಾರ 1.3 ಲಕ್ಷ ಕೋಟಿ ರೂ.ಗಳವರೆಗೆ ವೆಚ್ಚ ಮಾಡಬೇಕಿದೆ. ಒಟ್ಟಾರೆ ವೆಚ್ಚ 1.45 ಲಕ್ಷ ಕೋಟಿ ರೂ.ಗಳಷ್ಟಾಗಲಿದೆ.

ರಿಸರ್ವ್ ಬ್ಯಾಂಕ್‌ನಿಂದ 99,122 ಕೋಟಿ ರೂ.ಗಳ ಡಿವಿಡೆಂಡ್ ಬರಲಿದೆ ಹಾಗೂ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆ ಮೂಲಕ ಈ ಹೆಚ್ಚುವರಿ ಹೊರೆಯನ್ನು ನಿಭಾಯಿಸಲಾಗುವುದು ಎಂದು ಮೂಲಗಳು ಇಂಗಿತ ವ್ಯಕ್ತಪಡಿಸಿವೆ.

ಪ್ರಸಕ್ತ ದೇಶದಲ್ಲಿ ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆಗಳನ್ನು ನೀಡಲಾಗುತ್ತಿದೆ. ಈ ತಿಂಗಳ ಮಧ್ಯಾವಧಿಯಲ್ಲಿ ಸ್ಪುಟ್ನಿಕ್ ವಿ ಲಸಿಕೆ ಲಭ್ಯವಾಗಲಿದೆ.

## ಲಯನ್ಸ್ ಕ್ಲಬ್‌ನ ಸದಸ್ಯರಿಗೆ ಲಸಿಕೆ ನೀಡಲು ಜಿಲ್ಲಾಡಳಿತಕ್ಕೆ ಮನವಿ



ದಾವಣಗೆರೆ, ಜೂ.8- ಲಯನ್ಸ್ ಕ್ಲಬ್‌ನ ಸದಸ್ಯರು ಮತ್ತು ಅವರ ಕುಟುಂಬ ವರ್ಗದವರಿಗೆ ಕೋವಿಡ್ ಲಸಿಕೆ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ಕ್ಲಬ್‌ನ ಅಧ್ಯಕ್ಷ ಎಸ್.ಓಂಕಾರಪ್ಪ ಅವರು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರನ್ನು ಇಂದು ಭೇಟಿ ಮಾಡಿ, ಲಿಖಿತ ಮನವಿ ಪತ್ರ ಸಲ್ಲಿಸಿದರು. ಕ್ಲಬ್‌ನ ಹಿರಿಯ ಸದಸ್ಯರುಗಳಾದ ಆರ್. ಜಿ.ಶ್ರೀನಿವಾಸಮೂರ್ತಿ, ಬೆಳ್ಳೂಡಿ ಶಿವಕುಮಾರ್, ಎಸ್.ಕೆ. ಮಲ್ಲಿಕಾರ್ಜುನ, ಜೆ.ಓ.ವಿನಾಯಕ ಮತ್ತಿತರರು ಉಪಸ್ಥಿತರಿದ್ದರು.

## ಮುಸ್ಲಿಂ ಸಮಾಜದಿಂದ ಆಕ್ಸಿಜನ್ ಕಾನ್ಸಂಟ್ರೇಟರ್ ಕೊಡುಗೆ



ದಾವಣಗೆರೆ, ಜೂ.8- ನಗರದ ತಂಜೀಮುಲ್ ಮುಸ್ಲಿಮೀನ್ ಫಂಡ್ ಅಸೋಸಿಯೇಷನ್ ವತಿಯಿಂದ 5 ಆಮ್ಲಜನಕ ಯಂತ್ರಗಳನ್ನು ಖರೀದಿಸಲಾಗಿದ್ದು, ಅವಶ್ಯಕತೆ ಇರುವ ಕೋವಿಡ್ ಬಡ ರೋಗಿಗಳಿಗೆ ಉಚಿತವಾಗಿ ಒದಗಿಸಲಾಗುವುದು. ಅಗತ್ಯ ಇರುವವರು ಸಮಾಜದ ನೂರಾನಿ ಶಾದಿ ಮಹಲ್‌ನಲ್ಲಿರುವ ಕಛೇರಿಯನ್ನು ಸಂಪರ್ಕಿಸಿ, ಯಂತ್ರದ ಸದುಪಯೋಗ ಪಡೆಯಬಹುದು. ಈ ಸಂದರ್ಭದಲ್ಲಿ ಅಸೋಸಿಯೇಷನ್‌ನ ಅಯೂಬ್ ಪೈಲ್ವಾನ್, ಅಬ್ದುಲ್ ಘನಿ ತಾಹೇರ್, ಸಿರಾಜ್ ಅಹಮದ್, ಆರೀಫ್ ಖಾನ್, ಲಿಯಾಖತ್ ಖಾನ್, ಸಯ್ಯದ್ ಚಾರ್ಲಿ, ಅಬ್ದುಲ್ ಜಬ್ಬಾರ್, ಜಬ್ಬೀರ್, ದಾದಾಪೀರ್, ದಾದಾಪೀರ್ ಕೆ. ಅವರುಗಳು ಉಪಸ್ಥಿತರಿದ್ದರು.

## ಕೊರೊನಾ : 1,700 ಸರ್ಕಾರಿ ನೌಕರರ ಸಾವು

ಬೆಂಗಳೂರು, ಜೂ. 8 - ಕಳೆದ ವರ್ಷ ಸಾಂಕ್ರಾಮಿಕ ರೋಗದ ಆರಂಭದಿಂದ ಕನಿಷ್ಠ 1,700 ರಾಜ್ಯ ಸರ್ಕಾರಿ ನೌಕರರು ಕೊರೊನಾಗೆ ಬಲಿಯಾಗಿದ್ದಾರೆ. ಈ ಪೈಕಿ, 121 ಉದ್ಯೋಗಿಗಳು ಏಪ್ರಿಲ್ 2021 ರಿಂದ ಎರಡನೇ ಅಲೆಯ ಸಮಯದಲ್ಲಿ ಸಾವನ್ನಪ್ಪಿದ್ದಾರೆ.

ಶಿಕ್ಷಣ, ಆರೋಗ್ಯ ಮತ್ತು ಪೊಲೀಸ್ ಇಲಾಖೆಗಳಿಗೆ ಸೇರಿದ ನೌಕರರು ಕೊರೊನಾದಿಂದ ಹೆಚ್ಚು ಘಾಸಿಗೊಂಡಿದ್ದಾರೆ. . ಸುಮಾರು 60 ರಷ್ಟು ಉದ್ಯೋಗಿಗಳಿಗೆ ಕನಿಷ್ಠ ಒಂದು ಡೋಸ್ ಲಸಿಕೆ ನೀಡಲಾಗಿದೆ.

ರಾಜ್ಯದಲ್ಲಿ 72 ಇಲಾಖೆಗಳಿದ್ದು, ಸರ್ಕಾರವು 5.3 ಲಕ್ಷ ಜನರನ್ನು ನೇಮಿಸಿಕೊಂಡಿದ್ದರೆ, ಮಂಜೂರಾದ ಶಾಶ್ವತ ಹುದ್ದೆಗಳು 7.7 ಲಕ್ಷ. 1.5 ಲಕ್ಷ ಗುತ್ತಿಗೆ ನೌಕರರೂ ಇದ್ದಾರೆ. ಕೊರೊನಾದಿಂದ ಸಾವನ್ನಪ್ಪಿದ ಸರ್ಕಾರಿ ನೌಕರರ ರಕ್ತಸಂಬಂಧಿಗಳಿಗೆ ಮತ್ತು ಅವಲಂಬಿತರಿಗೆ ಉದ್ಯೋಗ ನೀಡಲು ಸರ್ಕಾರ 30 ಲಕ್ಷ ರೂ. ಪರಿಹಾರ ನಿಗದಿ ಮಾಡಿದೆ.

ಕಳೆದ ಕೆಲವು ತಿಂಗಳುಗಳಲ್ಲಿ ಕೊರೊನಾದಿಂದಾಗಿ ವಿಧಾನ ಸೌಧ, ವಿಕಾಸ ಸೌಧ ಮತ್ತು ಎಂಎಸ್ ಬಿಲ್ಡಿಂಗ್‌ಗಳಲ್ಲಿ ಕೆಲಸ ಮಾಡುತ್ತಿದ್ದ ನೌಕರರು ಸಾವನ್ನಪ್ಪಿದ್ದಾರೆ.

## ಸಿ.ಎಂ. ಉದಾಸಿ ನಿಧನಕ್ಕೆ ಎಸ್ಸೆಸ್, ಎಸ್ಸೆಸ್ಸೆಂ ಸಂತಾಪ

ದಾವಣಗೆರೆ, ಜೂ.8 - ಮಾಜಿ ಸಚಿವರೂ ಆದ ಹಿರಿಯ ಶಾಸಕ ಸಿ.ಎಂ. ಉದಾಸಿ ಅವರ ನಿಧನಕ್ಕೆ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಮಹಾಸಭಾದ ಉಪಾಧ್ಯಕ್ಷರುಗಳಾದ ಎಸ್.ಎಸ್.ಗಣೇಶ್, ಅಥಣಿ ವೀರಣ್ಣ, ಅಣಬೇರು ರಾಜಣ್ಣ ಸಂತಾಪ ವ್ಯಕ್ತಪಡಿಸಿದ್ದಾರೆ.

ಉದಾಸಿ ಅವರು ಉತ್ತರ ಕರ್ನಾಟಕ ಭಾಗದ ವೀರಶೈವ-ಲಿಂಗಾಯತ ಸಮುದಾಯದ ಪ್ರಭಾವಿ ನಾಯಕರಾಗಿದ್ದರು. ಅತ್ಯಂತ ಸರಳ, ಸಜ್ಜನ ರಾಜಕಾರಣಿಯಾಗಿದ್ದರು. ರೈತ ಕುಟುಂಬದಿಂದ ಬಂದ ಅವರು, ರಾಜಕೀಯದಲ್ಲಿ ಉನ್ನತ ಸ್ಥಾನಕ್ಕೇರಿದ್ದರು. ಇಳಿ ವಯಸ್ಸಿನಲ್ಲೂ ಶಾಸಕರಾಗಿ ಕ್ಷೇತ್ರದ ಜನರ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಸೌಮ್ಯ ಸ್ವಭಾವದ ಉದಾಸಿ ಅವರು 7 ಭಾಷೆಗಳನ್ನು ಸುಲಿತವಾಗಿ ಮಾತನಾಡುತ್ತಿದ್ದುದು ಅವರ ಪಾಂಡಿತ್ಯಕ್ಕೆ ಸಾಕ್ಷಿ ಎಂದು ತಮ್ಮ ಸಂತಾಪ ಸೂಚಕದಲ್ಲಿ ಅವರುಗಳು ಸ್ಮರಿಸಿದ್ದಾರೆ.

## ಬಿಜೆಪಿ ಹಿರಿಯ ಶಾಸಕ ಉದಾಸಿ ಇನ್ನಿಲ್ಲ

(1ನೇ ಪುಟದಿಂದ) 1994ರಲ್ಲಿ ಜನತಾ ದಳ ಅಭ್ಯರ್ಥಿಯಾಗಿ ಅವರು ಗೆಲುವು ಸಾಧಿಸಿದ್ದರು. 1999ರಲ್ಲಿ ಜನತಾ ದಳ ಒಡೆದ ನಂತರ ಅವರು ಆರಂಭದಲ್ಲಿ ಜೆಡಿ(ಯು)ನಲ್ಲಿದ್ದರಾದರೂ, ನಂತರ ಬಿಜೆಪಿಗೆ ಸೇರ್ಪಡೆಯಾಗಿದ್ದರು.

2004 ಹಾಗೂ 2008ರಲ್ಲಿ ಅವರು ಬಿಜೆಪಿ ಟಿಕೆಟ್‌ನಿಂದ ಗೆಲುವು ಸಾಧಿಸಿದ್ದರು. ಬಿ.ಎಸ್. ಯಡಿಯೂರಪ್ಪ ಅವರು ಕೆ.ಜೆ.ಪಿ. ಸ್ಥಾಪಿಸಿದ ನಂತರ ಅವರು ಹೊಸ ಪಕ್ಷಕ್ಕೆ ಸೇರ್ಪಡೆಯಾಗಿದ್ದರು. 2013ರಲ್ಲಿ ಅವರು ಚುನಾವಣೆಯಲ್ಲಿ ಸೋಲು ಕಂಡಿದ್ದರು.

2018ರಲ್ಲಿ ಯಡಿಯೂರಪ್ಪ ಜೊತೆ ಮತ್ತೆ ಬಿಜೆಪಿಗೆ ಬಂದಿದ್ದ ಅವರು, 2018ರ ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದರು. ಕುಮಾರಸ್ವಾಮಿ ನೇತೃತ್ವದ ಜೆಡಿಎಸ್- ಬಿಜೆಪಿ ಮೈತ್ರಿ ಸರ್ಕಾರದಲ್ಲಿ ಅವರು ಗ್ರಾಮೀಣಾಭಿವೃದ್ಧಿ ಸಚಿವರಾಗಿ ಮತ್ತು 2008ರ ಯಡಿಯೂರಪ್ಪ ಸರ್ಕಾರದಲ್ಲಿ ಲೋಕೋಪಯೋಗಿ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು.

ಕೊರೊನಾ ಹಿನ್ನೆಲೆಯಲ್ಲಿ ಸಾಮಾಜಿಕ ಅಂತರ ಹಾಗೂ ಕನಿಷ್ಠ ಪೊಲೀಸ್ ಸಿಬ್ಬಂದಿ ನಿಯೋಜನೆಯೊಂದಿಗೆ ಸಕಲ ಸರ್ಕಾರಿ ಗೌರವಗಳೊಂದಿಗೆ ಅವರ ಅಂತ್ಯಕ್ರಿಯೆ ನೆರವೇರಲಿದೆ ಎಂದು ರಾಜ್ಯ ಸರ್ಕಾರ ತಿಳಿಸಿದೆ.

ಉದಾಸಿ ಅವರ ಗೌರವಾರ್ಥ ಮಾನ್ಯ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಗೃಹ ಕಚೇರಿ ಕೃಷ್ಣಾದಲ್ಲಿ ಎರಡು ನಿಮಿಷಗಳ ಮೌನ ಆಚರಿಸಿ ನಮನ ಸಲ್ಲಿಸಿದರು.

ಉದಾಸಿ ಅವರ ನಿಧನಕ್ಕೆ ಮುಖ್ಯಮಂತ್ರಿ ಯಡಿಯೂರಪ್ಪ ಸಂತಾಪ ವ್ಯಕ್ತಪಡಿಸಿದ್ದು, ಸಜ್ಜನ ಹಾಗೂ ಕ್ರಿಯಾಶೀಲ ರಾಜಕಾರಣಿಯಾಗಿದ್ದ ಉದಾಸಿ, ಹಾನಗಲ್ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದರು. ಲೋಕೋಪ ಯೋಗಿ ಸಚಿವರಾಗಿ ಅತ್ಯಂತ ಉತ್ತಮವಾಗಿ ಕಾರ್ಯನಿರ್ವಹಿಸಿದ್ದರು. ರಾಜ್ಯದಾದ್ಯಂತ ಜನಪ್ರಿಯತೆ ಪಡೆದುಕೊಂಡಿದ್ದರು ಎಂದಿದ್ದಾರೆ.


ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ, ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಸೇರಿದಂತೆ ಹಲವು ಗಣ್ಯರು ಉದಾಸಿ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದ್ದಾರೆ.

## ಆರೋಗ್ಯ ಕ್ಷೇತ್ರದಲ್ಲಿ ಮೂಲಸೌಕರ್ಯಕ್ಕಾಗಿ ಒತ್ತಾಯ

ದಾವಣಗೆರೆ, ಜೂ.8- ಆರೋಗ್ಯ ಕ್ಷೇತ್ರದಲ್ಲಿ ಮೂಲಸೌಕರ್ಯಕ್ಕೆ ಒತ್ತಾಯಿಸಿ ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಓ) ಜಿಲ್ಲಾ ಸಮಿತಿ, ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿಯಿಂದ ಜಂಟಿಯಾಗಿ ನಿನ್ನೆ ಆನ್‌ಲೈನ್ ಸಮಾವೇಶ ನಡೆಸಲಾಯಿತು.

ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದ ಮೆಡಿಕಲ್ ಸರ್ವಿಸ್ ಸೆಂಟರ್‌ನ ಅಧ್ಯಕ್ಷರಾದ ಡಾ. ಸುಧಾ ಕಾಮತ್, ಕೋವಿಡ್ 2ನೇ ಅಲೆಯನ್ನು ಎದುರಿಸಲು ಸಕಾಲದಲ್ಲಿ ಸೂಕ್ತ ಸಿದ್ಧತೆ ಮಾಡಿಕೊಂಡಿದ್ದಿದ್ದರೆ, ಈ ಪ್ರಮಾಣದಲ್ಲಿ ಸಾವು-ನೋವುಗಳು ಸಂಭವಿಸುತ್ತಿರಲಿಲ್ಲ.

ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ಎಲ್ಲಾ ಸರ್ಕಾರಗಳು ಆರೋಗ್ಯ ಕ್ಷೇತ್ರವನ್ನು ಕಡೆಗಣಿಸಿವೆ. ಜನರ ಸುಲಿಗೆ ಮಾಡುವ ಸಾರ್ವತ್ರಿಕ ಆರೋಗ್ಯ ವಿಮೆ ನೀತಿಯನ್ನು ಇಂದಿನ ಸರ್ಕಾರಗಳು ಪೋಷಿಸುತ್ತಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಆಹಾರ ತಜ್ಞ ಕೆ.ಸಿ. ರಘು ಮಾತನಾಡಿ, ವಿಶ್ವ ಆರೋಗ್ಯ ಸಂಸ್ಥೆಯು ಆರೋಗ್ಯಕ್ಕಾಗಿ ದೇಶದ ಜಿಡಿಪಿಯಲ್ಲಿ ಶೇ.2.5ರಷ್ಟು ಖರ್ಚು ಮಾಡಬೇಕು ಎಂದು ಹೇಳಿದರೆ, ನಮ್ಮ ದೇಶದಲ್ಲಿ ಕೇವಲ ಶೇ. 1.2ರಷ್ಟು ಮಾತ್ರ. ಇದರಿಂದಾಗಿ ಅಗತ್ಯಕ್ಕೆ ತಕ್ಕಷ್ಟು ಆರೋಗ್ಯ ಸಿಬ್ಬಂದಿ ಮತ್ತು ಕಾರ್ಯಕರ್ತರು ಮತ್ತು ಚಿಕಿತ್ಸಾ ಸಲಕರಣೆಗಳು ನಮ್ಮಲ್ಲಿ ಲಭ್ಯವಿಲ್ಲ ಎಂದು ಹೇಳಿದರು.

ಎಐಡಿವೈಓ ಅಖಿಲ ಭಾರತ ಅಧ್ಯಕ್ಷರು ಹಾಗೂ ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿಯ ಸಲಹೆಗಾರ ರಾಮಾಂಜನಪ್ಪ ಆಲ್ದಳ್ಳಿ ಮಾತನಾಡಿ, ಕೋವಿಡ್‌ನಿಂದ ನಮ್ಮ ಆರೋಗ್ಯ ವ್ಯವಸ್ಥೆ ಹದಗೆಟ್ಟಿದೆ ಎಂಬುದು ತಪ್ಪು. ಬದಲಾಗಿ ಹದಗೆಟ್ಟ ಆರೋಗ್ಯ ವ್ಯವಸ್ಥೆಯ ನೈಜ ಸ್ಥಿತಿ ಕೋವಿಡ್‌ನಿಂದ ಬಟಾಬಯಲಾಗಿದೆ. ವಾರ್ಷಿಕ 24 ಲಕ್ಷ ಕೋಟಿ ತೆರಿಗೆಯನ್ನು ಕಟ್ಟುವ ಜನರ ಆರೋಗ್ಯಕ್ಕಾಗಿ ಸರ್ಕಾರ ಪುಡಿಗಾಸನ್ನು ಖರ್ಚು ಮಾಡುತ್ತಿಲ್ಲ ಎಂದರು.

ಎಐಡಿವೈಓ ರಾಜ್ಯಾಧ್ಯಕ್ಷ ಎಂ. ಉಮಾದೇವಿ ಸಮಾವೇಶದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿಯ ರಾಜ್ಯ ಕಾರ್ಯದರ್ಶಿ ಸಿದ್ದಲಿಂಗ ಬಾಗೇವಾಡಿ, ಮಧು, ಶಶಿಕುಮಾರ್, ಗುರುಪ್ರಸಾದ್, ಸೈಯದ್, ಹರಿಪ್ರಸಾದ್, ನಾಗಪ್ರಕಾಶ್, ರಾಜಶೇಖರ್, ಭವ್ಯ ಸೇರಿದಂತೆ, ಇತರರು ಭಾಗವಹಿಸಿದ್ದರು.

## ಇನ್ಫೋಸಿಸ್‌ಗೆ ಬಗೆಹರಿಸಲು ಸೂಚನೆ

(1ನೇ ಪುಟದಿಂದ) ಪಡಿಸಿದೆ. ಈ ಪೋರ್ಟಲ್ ಮೂಲಕ ರಿಟರ್ನ್ ಪರಿಶೀಲಿಸುವ ಅವಧಿಯನ್ನು 63 ದಿನಗಳಿಂದ ಒಂದು ದಿನಕ್ಕೆ ಇಳಿಸಲು ಹಾಗೂ ತ್ವರಿತ ರೀಫಂಡ್‌ಗೆ ಉದ್ದೇಶಿಸಲಾಗಿದೆ.

ನಿನ್ನೆ ಸಂಜೆ ವೆಬ್ ಪೋರ್ಟಲ್‌ಗೆ ಚಾಲನೆ ನೀಡಲಾಗಿತ್ತು. ಆದರೆ, ಮಂಗಳವಾರ ಬೆಳಿಗ್ಗೆ www.incometax.gov.in ವೆಬ್ ತಾಣದ ಬಗ್ಗೆ ಸೀತಾರಾಮನ್ ಅವರಿಗೆ ಹಲವಾರು ದೂರುಗಳು ಬಂದವು.

ಈ ತೊಡಕನ್ನು ಬಗೆಹರಿಸುವಂತೆ ಇನ್ಫೋಸಿಸ್ ಹಾಗೂ ಅದರ ಅಧ್ಯಕ್ಷ ನಂದನ್ ನಿಲೇಕಣಿಗೆ ಸೀತಾರಾಮನ್ ತಿಳಿಸಿದ್ದಾರೆ.

ಇನ್ಫೋಸಿಸ್ ಈ ಹಿಂದೆ ಜಿ.ಎಸ್.ಟಿ. ನೆಟ್‌ವರ್ಕ್ ತಾಣವನ್ನೂ ರೂಪಿಸಿತ್ತು. ಈ ಪೋರ್ಟಲ್ ಆರಂಭ ತಡವಾಗಿದ್ದಕ್ಕೆ ಇನ್ಫೋಸಿಸ್ ಸಾಕಷ್ಟು ಟೀಕೆಗಳನ್ನೂ ಎದುರಿಸಿತ್ತು.

## ಉದಾಸಿ ನಿಧನಕ್ಕೆ ನಾಗರಾಜ್ ಸಂತಾಪ

ದಾವಣಗೆರೆ, ಜೂ.8- ಮಾಜಿ ಸಚಿವ ಸಿ.ಎಂ. ಉದಾಸಿ ಅವರ ನಿಧನಕ್ಕೆ ಜಿಲ್ಲಾ ಜೆಡಿಎಸ್ ಮುಖಂಡ ಎಂ.ಎನ್.ನಾಗರಾಜ್ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ. ಸರಳ - ಮೃದು ಸ್ವಭಾವದವರಾಗಿದ್ದ ಉದಾಸಿ ಅವರು ತಮ್ಮ ಇಳಿ ವಯಸ್ಸಿನಲ್ಲೂ ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು ಎಂದು ಅವರು ಹೇಳಿದ್ದಾರೆ.

## ಸ್ವಕುಳಸಾಳಿ ಸಮಾಜದಿಂದ ದಿನಸಿ ಕಿಟ್



ದಾವಣಗೆರೆ ಜೂ.8 - ಕೊರೊನಾ ಸಂಕಷ್ಟ ಸಂದರ್ಭದಲ್ಲಿ ನಗರದ ಸ್ವಕುಳಸಾಳಿ ಸಮಾಜದ 100 ಕ್ಕೂ ಹೆಚ್ಚು ಅತೀ ಕಡು ಬಡವರಿಗೆ ಸ್ವಕುಳಸಾಳಿ ಸಮಾಜದಿಂದ ಆಹಾರ ಕಿಟ್‌ಗಳನ್ನು ವಿತರಿಸಲಾಯಿತು. ಸಮಾಜದ ಭಗವಾನ್ ಶ್ರೀ ಜಿವ್ಹೇಶ್ವರ ಮಂದಿರದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಕಿಟ್‌ಗಳನ್ನು ನೀಡಲಾಯಿತು.

ಸಮಾಜದ ಅಧ್ಯಕ್ಷ ಮೋಹನ್ ಟಿ.ಏಕಬೋಟೆ ಅವರ ಅಧ್ಯಕ್ಷತೆಯಲ್ಲಿ ಏರ್ಪಾಡಾಗಿದ್ದ ಈ ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಮಾಲತೇಶ್ ಸಪಾರೆ, ಕಾರ್ಯದರ್ಶಿ ಧರ್ಮರಾಜ್ ಏಕಬೋಟೆ, ಮಹಿಳಾ ಮಂಡಳಿಯ ಅಧ್ಯಕ್ಷರಾದ ಶ್ರೀಮತಿ ವಾಣಿ ವಾಂಜ್ರೆ, ಕಾರ್ಯದರ್ಶಿ ಶ್ರೀಮತಿ ಸುಜಾತ ರೋಖಡೆ, ಸಮಾಜದ ಮುಖಂಡರುಗಳಾದ ಸುರೇಂದ್ರ ವಾಂಜ್ರೆ, ಶಿವಾಜಿ ರಾವ್ ಢಗೆ, ಆನಂದ ಸಫಾರೆ, ಮಂಜುನಾಥ ಕಾಂಬ್ಳೆ, ಮನಿಮಠ್ ಕೊಟ್ರೇಶ್, ರಾಮಚಂದ್ರ ರೋಖಡೆ, ಆಹಾರ ಕಿಟ್‌ಗಳನ್ನು ತಯಾರಿಸಿದ ಮಲ್ಲಿಕಾರ್ಜುನ್ ಕ್ಷೀರ ಸಾಗರ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಜಗಳೂರಿನಲ್ಲಿ 80 ಲಕ್ಷ ವೆಚ್ಚದ ಆಮ್ಲಜನಕ ಘಟಕ ಸ್ಥಾಪನೆ



ಜಗಳೂರು, ಜೂ. 8 - ತಾಲ್ಲೂಕಿನ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಸುಮಾರು 80 ಲಕ್ಷ ರೂ. ವೆಚ್ಚದಲ್ಲಿ ಜಿಲ್ಲೆಯಲ್ಲಿಯೇ ಪ್ರಥಮವಾಗಿ ಆಮ್ಲಜನಕ ತಯಾರಿಕ ಘಟಕ ಸ್ಥಾಪನೆಯಾಗಿದೆ ಎಂದು ನಗರಾಭಿವೃದ್ಧಿ ಸಚಿವರೂ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ತಿಳಿಸಿದರು.

ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಆಕ್ಟ್ ಗ್ರ್ಯಾಂಟ್ಸ್ ಮತ್ತು ಶಕ್ತಿ ಕ್ಲೀನ್ ಮ್ಯಾಕ್ಸ್ ವಿಂಡ್ ಮತ್ತು ಸೋಲಾರ್ ಕಂಪನಿಗಳ ಸಹಯೋಗದಲ್ಲಿ ಜಿಲ್ಲೆಯಲ್ಲಿ ಇದೇ ಮೊದಲ ಬಾರಿಗೆ ನಿರ್ಮಿಸಿದ ಆಕ್ಸಿಜನ್ ಉತ್ಪಾದನಾ ಘಟಕವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಆಕ್ಸಿಜನ್ ಉತ್ಪಾದನಾ ಘಟಕ ಸ್ಥಾಪನೆ ಯಿಂದಾಗಿ ತಾಲ್ಲೂಕಿನ ಕೊರೊನಾ ರೋಗಿಗಳ ಚಿಕಿತ್ಸೆಗೆ ತುಂಬಾ ಅನುಕೂಲವಾಗಲಿದೆ. ಹಿಂದುಳಿದ ತಾಲ್ಲೂಕಿಗೆ ಖಾಸಗಿ ವಿಂಡ್ ಮತ್ತು ಸೋಲಾರ್ ಕಂಪನಿಗಳು 80 ಲಕ್ಷ ರೂ ವೆಚ್ಚದ ಕೊಡುಗೆ ನೀಡಿದ್ದಾರೆ. ಅವರಿಗೆ ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ ಎಂದರು.

ಆಸ್ಪತ್ರೆಯ ಕೋವಿಡ್ ಕೇರ್ ಸೆಂಟರ್ ಎಲ್ಲಾ ರೋಗಿಗಳಿಗೆ ಶಾಸಕ ಎಸ್.ವಿ ರಾಮಚಂದ್ರಪ್ಪ ಅವರು ಪ್ರತಿ ದಿನ ಸುಮಾರು 60 ಸಾವಿರ ರೂ.ಗಳ ವೆಚ್ಚದಲ್ಲಿ ಪೌಷ್ಟಿಕ ಆಹಾರ ನೀಡುತ್ತಿರುವುದು ಶ್ಲಾಘನೀಯ ಎಂದು ಸಚಿವರು ತಿಳಿಸಿದರು.

ಸಂಸದ ಜಿ.ಎಂ ಸಿದ್ದೇಶ್ವರ ಮಾತನಾಡಿ, ಶಾಸಕ ಎಸ್.ವಿ.ರಾಮಚಂದ್ರ ಕೊರೊನಾ ಗುಣಮುಖರಾಗಿ ಬಂದ 10 ದಿನಗಳಲ್ಲಿ ಆಕ್ಸಿಜನ್ ಉತ್ಪಾದನಾ ಘಟಕ ಸ್ಥಾಪನೆಗೆ ಶ್ರಮಿಸಿದ್ದಾರೆ. ದೊಡ್ಡ ಕೆಲಸವನ್ನು ಹೇಳದೇ ಮಾಡಿ ತೋರಿಸಿದ್ದಾರೆ. ಇದು ಅವರಿಗಿರುವ ಜನಪರ ಕಾಳಜಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶ್ರೀ ಮಹರ್ಷಿ ವಾಲ್ಮೀಕಿ ಪ.ಪಂ. ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಆದ ಶಾಸಕ ಎಸ್.ವಿ ರಾಮಚಂದ್ರ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಸೋಂಕಿತರನ್ನು ಕೋವಿಡ್ ಕೇರ್ ಸೆಂಟರ್‌ಗೆ ದಾಖಲಿಸಿದ್ದರಿಂದ ಸೋಂಕಿತರ ಸಂಖ್ಯೆ ಕಡಿಮೆಯಾಗುತ್ತದೆ. ಅಧಿಕಾರಿಗಳು, ಆಶಾ, ಅಂಗನವಾಡಿ ಶಿಕ್ಷಕಿಯರು ಉತ್ತಮ ಕೆಲಸ ಮಾಡಿದ್ದಾರೆ ಎಂದರು.

ತಾಲ್ಲೂಕಿನಲ್ಲಿ ಕೊರೊನಾ ಪ್ರಕರಣಗಳು ಕಡಿಮೆಯಾಗುತ್ತಿವೆ. ಅಗತ್ಯ ಬಿದ್ದರೆ ಇನ್ನೂ 50 ಬೆಡ್‌ಗಳನ್ನು ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ಆಸ್ಪತ್ರೆಗೆ 3 ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ಒದಗಿಸಿದ್ದೇನೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ವಿಜಯ ಮಹಾಂತೇಶ್ ದಾನಮ್ಮನವರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ಡಿ.ವೈ.ಎಸ್.ಪಿ. ನರಸಿಂಹ ವಿ. ತಾಮ್ರಧ್ವಜ. ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್, ತಹಶೀಲ್ದಾರ್ ಗಿರೀಶ್ ಬಾಬು, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ. ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಮಲ್ಲನಾಯ್ಕ್, ವೃತ್ತ ನಿರೀಕ್ಷಕ ಮಂಜುನಾಥ ಪಂಡಿತ್, ತಾಲ್ಲೂಕು ವೈದ್ಯಾಧಿಕಾರಿ ಡಾ. ನಾಗರಾಜ್, ಡಾ.ಮಲ್ಲಪ್ಪ. ಪಪಂ ಅಧ್ಯಕ್ಷ ಆರ್.ತಿಪ್ಪೇಸ್ವಾಮಿ, ಕ್ಲೀನ್ ಮ್ಯಾಕ್ಸ್ ವಿಂಡ್ ಸೋಲಾರ್ ಕಂಪನಿಯ ಪ್ರಧಾನ ವ್ಯವಸ್ಥಾಪಕ ಎಂ.ಎಸ್. ಸುಭಾಷ್ ಬಾಬು ಸೇರಿದಂತೆ, ತಾಲ್ಲೂಕು ಮಟ್ಟದ ಎಲ್ಲಾ ಅಧಿಕಾರಿಗಳು ಭಾಗವಹಿಸಿದ್ದರು.

## ಕೃಷಿ ಜಾಗೃತಿ ಅಭಿಯಾನಕ್ಕೆ ಕೃಷಿ ಸಚಿವರ ಚಾಲನೆ



ದಾವಣಗೆರೆ ಜೂ. 8 - ಕೃಷಿ ಇಲಾಖೆಯು ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿನ ರೈತರನ್ನು ಜಾಗೃತಗೊಳಿಸಲು ಆರಂಭಿಸಿರುವ 'ಕೃಷಿ ಜಾಗೃತಿ ಅಭಿಯಾನ' ವಿಶೇಷ ಪ್ರಚಾರ ವಾಹನಗಳಿಗೆ ಕೃಷಿ ಸಚಿವ ಬಿ.ಸಿ. ಪಾಟೀಲ್ ಅವರು ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಜಿಲ್ಲಾಡಳಿತ ಭವನದ ಆವರಣದಲ್ಲಿ ಕೃಷಿ ಜಾಗೃತಿ ಅಭಿಯಾನಕ್ಕೆ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರುಗಳಾದ ಮಾಡಾಳ್ ವಿರುಪಾಕ್ಷಪ್ಪ, ಎಸ್.ವಿ. ರಾಮಚಂದ್ರ, ಎಸ್.ಎ. ರವೀಂದ್ರನಾಥ್, ಪ್ರೊ. ಲಿಂಗಣ್ಣ, ಮೇಯರ್ ಎಸ್.ಟಿ. ವೀರೇಶ್, ಕೃಷಿ ಇಲಾಖೆ ಅಪರ ಆಯುಕ್ತ ವೆಂಕಟರಾವ್ ಪಾಟೀಲ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿ.ಪಂ. ಸಿಇಓ ಡಾ. ವಿಜಯ ಮಹಾಂತೇಶ್, ಎಸ್‌ಪಿ ಹನುಮಂತರಾಯ, ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್ ಮತ್ತಿತರರು ಉಪಸ್ಥಿತರಿದ್ದರು.

## ಕೇಂದ್ರದಿಂದ ಕೊರೊನಾ ಲಸಿಕೆಗಳಿಗೆ ದರ ನಿಗದಿ

ನವದೆಹಲಿ, ಜೂ. 8 – ಖಾಸಗಿ ಆಸ್ಪತ್ರೆಗಳಲ್ಲಿ ನೀಡಲಾಗುವ ಕೊವಿಶೀಲ್ಡ್ ಲಸಿಕೆಯ ಪ್ರತಿ ಡೋಸ್‌ಗೆ 780 ರೂ., ಕೊವ್ಯಾಕ್ಸಿನ್ ಲಸಿಕೆಗೆ 1,410 ಹಾಗೂ ಸ್ಪುಟ್ನಿಕ್ ವಿ ಲಸಿಕೆಗೆ 1,145 ರೂ.ಗಳ ದರ ನಿಗದಿ ಪಡಿಸಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ರಾಜ್ಯಗಳಿಗೆ ಪತ್ರ ಬರೆದಿರುವ ಆರೋಗ್ಯ ಸಚಿವಾಲಯ, ಹೆಚ್ಚು ಶುಲ್ಕ ಪಡೆಯುವ ಖಾಸಗಿ ಲಸಿಕಾ ಕೇಂದ್ರಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದೆ.

## ಮಾಯಕೊಂಡದಲ್ಲಿ ದಾನಿಗಳ ನೆರವಿನಿಂದ ಆಕ್ಸಿಜನ್ ಘಟಕ

ದಾವಣಗೆರೆ, ಜೂ. 7 - ದಾನಿಗಳ ನೆರವಿನೊಂದಿಗೆ ಮಾಯಕೊಂಡದಲ್ಲಿ ಆಕ್ಸಿಜನ್ ಘಟಕ ಸ್ಥಾಪಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ತಿಳಿಸಿದ್ದಾರೆ.

ಇಂದಿಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಮಾಯಕೊಂಡದಲ್ಲಿ ಆಕ್ಸಿಜನ್ ಘಟಕ ಸ್ಥಾಪಿಸುವ ಸಂಬಂಧ ಕ್ರಮ ತೆಗೆದುಕೊಳ್ಳಲು ಜಿಲ್ಲಾಧಿಕಾರಿಗಳಿಂದ ಮಾಹಿತಿ ಪಡೆಯುತ್ತಿದ್ದೇನೆ ಎಂದವರು ಹೇಳಿದರು.

ಜಿಲ್ಲೆಯಲ್ಲಿರುವ ಬ್ಲಾಕ್ ಫಂಗಸ್ ಸೋಂಕಿತರಿಗೆ ಔಷಧಿ ಪೂರೈಸುವ ಕುರಿತು ಕೇಂದ್ರ ರಾಸಾಯನಿಕ ಸಚಿವ ಸದಾನಂದ ಗೌಡ ಅವರ ಜೊತೆ ಮಾತನಾಡಿದ್ದೇನೆ. ಅಗತ್ಯ ಔಷಧ ಪೂರೈಸುವುದಾಗಿ ಅವರು ತಿಳಿಸಿದ್ದಾರೆ ಎಂದರು.

ತೋಟಗಾರಿಕಾ ಬೆಳೆ ಪರಿಹಾರ ಕಡಿಮೆಯಾಯಿತು ಎಂಬ ಪ್ರಶ್ನೆಗೆ ಉತ್ತರಿಸಿದ ಸಚಿವರು, ಪ್ರತಿ ಹೆಕ್ಟೇರ್‌ಗೆ 10 ಸಾವಿರ ರೂ. ಪರಿಹಾರವನ್ನು ಸರ್ಕಾರ ಪ್ರಕಟಿಸಿದ್ದು, ಇದನ್ನು ಸಮರ್ಪಕವಾಗಿ ತಲುಪಿಸಲಾಗುವುದು. ಪರಿಹಾರ ಪ್ರಮಾಣ ಹೆಚ್ಚಿಸುವ ಬಗ್ಗೆ ಮುಖ್ಯಮಂತ್ರಿ ಜೊತೆ ಮಾತನಾಡುತ್ತೇನೆ ಎಂದರು. ಹಣಕ್ಕಾಗಿ ಲಸಿಕೆ ನೀಡುವುದಾಗಿ ಟ್ವಿಟ್ಟರ್‌ನಲ್ಲಿ ವ್ಯಕ್ತಿಯೊಬ್ಬರು ಮೆಸೇಜ್ ಕಳಿಸುತ್ತಿದ್ದಾರೆ ಹಾಗೂ ನಿಯಮ ಮೀರಿ 44 ವರ್ಷದ ಒಳಗಿನವರಿಗೆ ಲಸಿಕೆ ನೀಡ ಲಾಗುತ್ತಿದೆ ಎಂಬ ಆರೋಪಗಳ ಬಗ್ಗೆ ಪ್ರಶ್ನಿಸಿದಾಗ, ಮಾನದಂಡಗಳ ಪ್ರಕಾರ ಕೆಲಸ ಮಾಡಿ ಜನರಿಗೆ ರಕ್ಷಣೆ ಮಾಡುವಂತೆ ಅಧಿಕಾರಿಗಳಿಗೆ ತಿಳಿಸುವುದಾಗಿ ಹೇಳಿದರು.

ಶಾಸಕ ಶಾಮನೂರು ಶಿವಶಂಕರಪ್ಪ ಅವರು ವೈಯಕ್ತಿಕವಾಗಿ ಜನರಿಗೆ ಲಸಿಕೆ ನೀಡುತ್ತಿರುವುದಕ್ಕೆ ಸರ್ಕಾರದ ವತಿಯಿಂದ ಧನ್ಯವಾದ ಸಲ್ಲಿಸುವುದಾಗಿ ಇದೇ ಸಂದರ್ಭದಲ್ಲಿ ಹೇಳಿದ ಸಚಿವರು, 18 ವರ್ಷ ಮೀರಿದವರಿಗೂ ಲಸಿಕೆ ನೀಡಲು ಅವಕಾಶ ಕೊಡಬೇಕೆಂದು ಶಾಸಕರು ಕೇಳಿದ್ದಾರೆ. ಜೂನ್ 21ರಂದು ಲಸಿಕೆಯ ಹೊಸ ನೀತಿ ಜಾರಿಗೆ ಬರಲಿದೆ. ಆ ಸಂದರ್ಭದಲ್ಲಿ ಲಸಿಕೆ 18 ವರ್ಷ ಮೀರಿದವರಿಗೆ ಮುಕ್ತವಾಗಬಹುದು ಎಂದು ಹೇಳಿದರು.

## ಬ್ಲ್ಯಾಕ್ ಫಂಗಸ್ ಲಕ್ಷಣ ಆರಂಭದಲ್ಲೇ ಪತ್ತೆ ಹಚ್ಚಿದರೆ ಗುಣಪಡಿಸಬಹುದು



ದಾವಣಗೆರೆ, ಜೂ.8- ಕೊರೊನಾ ಸೋಂಕಿನಿಂದ ಗುಣಮುಖರಾದವರಲ್ಲಿ ಇತ್ತೀಚಿಗೆ ಕಂಡು ಬರುತ್ತಿರುವ ಕಪ್ಪು ಶಿಲೀಂಧ್ರ ಸೋಂಕನ್ನು ಬೇಗ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ನೀಡಿದರೆ ರೋಗವನ್ನು ಸಂಪೂರ್ಣವಾಗಿ ಗುಣಪಡಿಸಬಹುದು ಎಂದು ನಗರದ ಕಿವಿ, ಮೂಗು, ಗಂಟಲು ತಜ್ಞ ಡಾ. ಎ.ಎಂ. ಶಿವಕುಮಾರ್ ತಿಳಿಸಿದ್ದಾರೆ.

ಡಾ. ಶಿವಕುಮಾರ್ ಅವರ ಸಲಹೆಯನ್ನು ಜಿಲ್ಲಾಡಳಿತವು ವಿಡಿಯೋ ರೂಪದಲ್ಲಿ ಬಿಡುಗಡೆ ಮಾಡಿದ್ದು, ಸೋಂಕಿನಿಂದ ಗುಣಮುಖರಾಗಿ ಮನೆಗೆ ಹಿಂದುರುಗಿದ ನಂತರ ಮಧುಮೇಹದಿಂದ ಬಳಲುತ್ತಿ ರುವವರು, ಮಧ್ಯ ವಯಸ್ಕರು ಸೇರಿದಂತೆ ವಯಸ್ಸಿನ ಭೇದವಿಲ್ಲದೆ ಆರೋಗ್ಯವಂತ ಯುವಕರಲ್ಲೂ ಕಪ್ಪು ಶಿಲೀಂಧ್ರ ರೋಗ ಇತ್ತೀಚಿಗೆ ಹೆಚ್ಚಿನ ಜನರಲ್ಲಿ ಕಂಡುಬರುತ್ತಿದೆ ಎಂದು ಡಾ. ಶಿವಕುಮಾರ್ ತಿಳಿಸಿದ್ದಾರೆ.

ಕೋವಿಡ್‌ನಿಂದ ಗುಣಮುಖ ರಾದವರು ಎಂಟರಿಂದ ಹತ್ತು ದಿನಗಳಲ್ಲಿ ತಮ್ಮ ಮೂಗಿನಲ್ಲಿ ಬದಲಾವಣೆಗಳು ಕಂಡುಬಂದಲ್ಲಿ ತಡಮಾಡದೇ ತಜ್ಞರನ್ನು ಸಂಪರ್ಕಿಸಬೇಕು. ಮಾರಣಾಂತಿಕ ವಾಗಬಲ್ಲ ಈ ರೋಗದ ಕುರಿತು ನಿರ್ಲಕ್ಷ್ಯ ಮಾಡದೇ ಆರಂಭದಲ್ಲೇ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ನೀಡಿದರೆ ಸಂಪೂರ್ಣ ಗುಣ ಪಡಿಸಬಹುದು ಎಂದು ಅವರು ಸಲಹೆ ನೀಡಿದ್ದಾರೆ.

ಇದು ಸಾಮಾನ್ಯ ಕಾಯಿಲೆ ಅಲ್ಲ. ಇದು ಮೂಗಿನಿಂದ ಆರಂಭಗೊಂಡ ನಂತರ ಕಣ್ಣು, ಮೆದುಳು ಹೀಗೆ ಕೆಲವೇ ದಿನಗಳಲ್ಲಿ ತೀವ್ರ ಉಲ್ಬಣ ಗೊಂಡು ಮಾರಣಾಂತಿಕವಾಗಬಲ್ಲದು. ಸೋಂಕಿನಿಂದ ಗುಣಮುಖರಾದವರು ಕಿವಿ, ಮೂಗು, ಗಂಟಲಲ್ಲಿ ತೊಂದರೆಗಳು ಕಂಡು ಬಂದರೆ ತಕ್ಷಣ ವೈದ್ಯರನ್ನು ಸಂಪರ್ಕ ಮಾಡಬೇಕೆಂದು ಸಲಹೆ ನೀಡಿದ್ದಾರೆ.

## ಜನಸಂಖ್ಯೆ, ಸೋಂಕು ಪ್ರಮಾಣದಂತೆ ಲಸಿಕೆ

ನವದೆಹಲಿ, ಜೂ. 8-ಜನಸಂಖ್ಯೆ ಹಾಗೂ ಸೋಂಕು ಪ್ರಮಾಣದ ಆಧಾರದ ಮೇಲೆ ರಾಜ್ಯಗಳಿಗೆ ಕೊರೊನಾ ಲಸಿಕೆಗಳನ್ನು ಹಂಚುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ.ರಾಜ್ಯಗಳಿಗೆ ಸಮಯೋಚಿತವಾಗಿ, ಸೂಕ್ತ ಪ್ರಮಾಣದಲ್ಲಿ ಮತ್ತು ದುರ್ಗಮ ಪ್ರದೇಶದಲ್ಲಿರುವ ಖಾಸಗಿ ಆರೋಗ್ಯ ಸೇವಾ ಕೇಂದ್ರಗಳಿಗೂ ತಲುಪುವಂತೆ ಲಸಿಕೆ ನೀಡುವುದಾಗಿ ಕೇಂದ್ರ ಸರ್ಕಾರ ಹೇಳಿದೆ. ಜನಸಂಖ್ಯೆ, ಸೋಂಕು, ಲಸಿಕೆಯಲ್ಲಿ ಆಗುವ ಪ್ರಗತಿಯ ಆಧಾರದ ಮೇಲೆ ರಾಜ್ಯಗಳಿಗೆ ಉಚಿತವಾಗಿ ಲಸಿಕೆ ನೀಡಲಾಗುವುದು ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ.

## ಯಶವಂತರಾವ್ ಜಾಧವ್ 2ನೇ ಡೋಸ್ ಲಸಿಕೆ ಪಡೆದು ಅಭಿಯಾನಕ್ಕೆ ಚಾಲನೆ



ದಾವಣಗೆರೆ, ಜೂ.8- ಪಾಲಿಕೆ ವ್ಯಾಪ್ತಿಯ 10ನೇ ವಾರ್ಡ್ ನಲ್ಲಿ ಕೋವಿಡ್ ಲಸಿಕೆ ಕಾರ್ಯಕ್ರಮಕ್ಕೆ ಬಿಜೆಪಿಯ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ಅವರು 2ನೇ ಲಸಿಕೆಯನ್ನು ತಾವೇ ಹಾಕಿಸಿಕೊಳ್ಳುವ ಮೂಲಕ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮೇಯರ್ ಎಸ್.ಟಿ. ವೀರೇಶ್, ಸದಸ್ಯರಾದ ರಾಕೇಶ್ ಜಾಧವ್, ಸೋಗಿ ಶಾಂತಕುಮಾರ್, ಶಿವನಗೌಡ ಟಿ.ಪಾಟೀಲ್, ಜಿಲ್ಲಾ ಕಾರ್ಯದರ್ಶಿ ಗೋಪಾಲ ರಾವ್ ಮಾನೆ, ವಾರ್ಡಿನ ಪ್ರಮುಖರಾದ ಗೋವಿಂದರಾಜ್, ಎಸ್.ಕೆ.ಮಹಾಂತೇಶ್, ನಾಗರಾಜ್ ಅಂಗಡಿ, ಕಿಶೋರ್, ಟಿಂಕರ್ ಮಂಜಣ್ಣ, ಯರಿಸ್ವಾಮಿ, ಶಂಕರ್ ಭಟ್ಟ, ಪ್ರವೀಣ್ ಜಾಧವ್, ಗಣೇಶ್ ರಾವ್, ಲಸಿಕೆ ಕೇಂದ್ರದ ಸಿಬ್ಬಂದಿಗಳಾದ ಮಮತಾ, ಪ್ರಭಾವತಿ, ಪ್ರೇಮ, ಚನ್ನಗಿರಿ ಶಾಲೆಯ ಸಿಬ್ಬಂದಿ ಇದ್ದರು.

## 63 ದಿನಗಳ ನಂತರ ಸೋಂಕು ಕಡಿಮೆ

ನವದೆಹಲಿ, ಜೂ. 8 – ಕೊರೊನಾ ಎರಡನೇ ಅಲೆಯಲ್ಲಿ 63 ದಿನಗಳ ನಂತರ ಮೊದಲ ಬಾರಿಗೆ ದೇಶದಲ್ಲಿ ಲಕ್ಷಕ್ಕೂ ಕಡಿಮೆ ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ. ಇದೇ ವೇಳೆ ಪಾಸಿಟಿವ್ ದರ ಶೇ.4.62ಕ್ಕೆ ಕುಸಿದಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಮಂಗಳವಾರ ದೇಶದಲ್ಲಿ 86,498 ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ. ಇದು 66 ದಿನಗಳಲ್ಲೇ ಅತಿ ಕಡಿಮೆಯಾಗಿದೆ.

## ಕಾಣೆಯಾಗಿದ್ದಾರೆ



**ಅಗಸ್ತಯ್ಯ,** ವಯಸ್ಸು 54 ವರ್ಷ, ಬ್ಲೂ ಕಲರ್ ಶರ್ಟ್, ಚೆಕ್ಸ್ ಕಲರ್ ಪಂಚೆ ಹಾಕಿಕೊಂಡಿದ್ದು, ಇವರು ದಿನಾಂಕ 07.06.2021ರ ಸೋಮವಾರ ಬೆಳಿಗ್ಗೆ 9.30ರ ಸಮಯದಲ್ಲಿ ಎಂ.ಸಿ.ಸಿ. 'ಎ' ಬ್ಲಾಕ್, ಡೋರ್ ನಂ. 2046, 2ನೇ ಮೇನ್, 3ನೇ ಕ್ರಾಸ್, ಮನೆಯಿಂದ ವಾಕಿಂಗ್ ಹೋದವರು ಪುನಃ ವಾಪಸ್ ಬಂದಿರುವುದಿಲ್ಲ. ಯಾರಾದರೂ ನೋಡಿದಲ್ಲಿ, ಹತ್ತಿರದ ಬಡಾವಣೆ ಪೊಲೀಸ್ ಠಾಣೆಗಾಗಲಿ ಅಥವಾ ಈ ಕೆಳಗಿನ ನಂಬರಿಗಾಗಲಿ ತಿಳಿಸಬೇಕಾಗಿ ವಿನಂತಿ.

**ವೆಂಕಟ ಚೌಧರಿ**
ಎಂ.ಸಿ.ಸಿ. 'ಎ' ಬ್ಲಾಕ್, ಡೋರ್ ನಂ. 2046, 2ನೇ ಮೇನ್, 3ನೇ ಕ್ರಾಸ್, ದಾವಣಗೆರೆ. 81971-38636, 73536-63322

## ಪ್ರಥಮ ವರ್ಷದ ಪುಣ್ಯಸ್ಮರಣೆ



**ದಿ|| ಕೊಂಡಜ್ಜಿ ಧನ್ಯಕುಮಾರ್**
ನಿಧನ : *10-06-2020*
ನೀವು ನಮ್ಮನ್ನಗಲಿ ವರ್ಷವಾಯಿತು.
ಸದಾ ನಿಮ್ಮ ನೆನಪಿನಲ್ಲಿರುವ

ಶ್ರೀಮತಿ ರೇವಮ್ಮ ದಿ|| ಕೊಂಡಜ್ಜಿ ನಾಗೇಂದ್ರಪ್ಪ
ಮತ್ತು ಅಕ್ಕ, ಅಣ್ಣಂದಿರು,
ಕೊಂಡಜ್ಜಿ ವಂಶಸ್ಥರು, ಶಾಮನೂರು
ಹಾಗೂ ಬಂಧು-ಮಿತ್ರರು.

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 06.06.2021ರಂದು ನಿಧನರಾದ
ಬಿಳಿಚೋಡು ಶಿವಪ್ರಕಾಶ್ ಬಸ್ ಮಾಲೀಕರಾದ
**ಶ್ರೀ ನಾಸೀರ್**
**ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.**
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಕಮ್ಮತ್ತಹಳ್ಳಿ ಮಂಜುನಾಥ್,** ಅಧ್ಯಕ್ಷರು
ದಾವಣಗೆರೆ ಜಿಲ್ಲಾ ಖಾಸಗಿ ಬಸ್ ಮಾಲೀಕರ ಸಂಘ
ಹಾಗೂ ಸರ್ವ ಸದಸ್ಯರುಗಳು ಮತ್ತು
ಎಲ್ಲಾ ಖಾಸಗಿ ಬಸ್ ಮಾಲೀಕರುಗಳು,
ಜಿಲ್ಲಾ ಖಾಸಗಿ ಬಸ್ ಏಜೆಂಟರುಗಳ ಸಂಘ
ಅಧ್ಯಕ್ಷರು ಹಾಗೂ ಪದಾಧಿಕಾರಿಗಳು
ಹಾಗೂ ಸರ್ವ ಸದಸ್ಯರುಗಳು ದಾವಣಗೆರೆ.

ನುಡಿದಂತೆ ನಡೆದ 'ಸಂಜೀವಿನಿ ಪುರುಷರು'
ಸನ್ಮಾನ್ಯ ಡಾ|| ಶಾಮನೂರು ಶಿವಶಂಕರಪ್ಪನವರು ಮತ್ತು
ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್‌ರವರು
ಇವರ ನೇತೃತ್ವದಲ್ಲಿ



14, 11, 12 ಮತ್ತು
9ನೇ ವಾರ್ಡ್‌ಗಳ
ಸಮಸ್ತ ನಾಗರಿಕರಿಗೆ



ಉಚಿತ ಕೊರೊನಾ ಲಸಿಕಾ ಶಿಬಿರ
ದಿನಾಂಕ 09.06.2021ರ ಬುಧವಾರ ಬೆಳಿಗ್ಗೆ 10 ರಿಂದ ಪ್ರಾರಂಭ
ಲಸಿಕಾ ಶಿಬಿರದ ಸ್ಥಳ : ಎಸ್.ಎಸ್. ಸಾರ್ವಜನಿಕ ಆಸ್ಪತ್ರೆ, ಕೆ.ಆರ್. ರಸ್ತೆ, ದಾವಣಗೆರೆ.
ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ ಅವರು
ಇಂದು ಮಧ್ಯಾಹ್ನ 12.30 ಕ್ಕೆ ಲಸಿಕಾ ಶಿಬಿರ ಕೇಂದ್ರಕ್ಕೆ ಭೇಟಿ ನೀಡುವರು.
ನುಡಿದಂತೆ ನಡೆದ ನಾಯಕರುಗಳಿಗೆ ದಾವಣಗೆರೆ ನಾಗರಿಕರ ಪರವಾಗಿ ಕೃತಜ್ಞತೆಗಳು.





ಚಮನ್‌ಸಾಬ್
ಸದಸ್ಯರು, ಮಹಾನಗರ ಪಾಲಿಕೆ, 14ನೇ ವಾರ್ಡ್, ದಾವಣಗೆರೆ.

ಸೈಯದ್ ಚಾರ್ಲಿ
ಸದಸ್ಯರು, ಮಹಾನಗರ ಪಾಲಿಕೆ, 11ನೇ ವಾರ್ಡ್, ದಾವಣಗೆರೆ.

ಉರ್‌ಬಾನು (ಪಂಡಿತ್)
ಶಫೀಕ್ ಪಂಡಿತ್
ಸದಸ್ಯರು, ಮಹಾನಗರ ಪಾಲಿಕೆ, 12ನೇ ವಾರ್ಡ್, ದಾವಣಗೆರೆ.

ಜಾಕೀರ್ ಅಲಿ
ಸದಸ್ಯರು, ಮಹಾನಗರ ಪಾಲಿಕೆ, 9ನೇ ವಾರ್ಡ್, ದಾವಣಗೆರೆ.

ಅಯೂಬ್ ಪೈಲ್ವಾನ್
ಅಧ್ಯಕ್ಷರು, ದಕ್ಷಿಣ ವಲಯ ಕಾಂಗ್ರೆಸ್ ಸಮಿತಿ

ಬನ್ನಿ, ಎಲ್ಲರೂ ಕೈ ಜೋಡಿಸೋಣ, ಕೊರೊನಾ ಎದುರು ಜಯ ಸಾಧಿಸೋಣ

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte